# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA


epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 277 Issue: 277 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 11.05.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2














### ನಿನಗೆ ನೀನೇ ಬೆಳಕು

ಮಾರ್ಗದರ್ಶನ ನೀಡುವವರು
ಇಲ್ಲದಿದ್ದರೇನು ? ಹೊಸಮಾರ್ಗ ಸೃಷ್ಟಿಸುವ
ಧೈರ್ಯ ನಿನ್ನಲ್ಲಿದ್ದರೆ
ಇಡೀ ಜಗತ್ತು ನಿನ್ನ ಹಿಂದೆ.
–ಸ್ವಾಮಿ ವಿವೇಕಾನಂದ


**Call Us for Advertisements**
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ
ಶುಭಾಶಯ, ಸಾಧಕರಿಗೆ/
ವಿದ್ಯಾರ್ಥಿಗಳಿಗೆ ಅಭಿನಂದನೆ
ಕೋರಲು ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


### ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಕಮಲಾಪುರದಲ್ಲಿ 26.17 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಗವಿಯಪ್ಪ ಚಾಲನೆ ಅಮೃತ್ 2.0 ಕುಡಿಯುವ ನೀರು ಸರಬರಾಜು ಕಾಮಗಾರಿಗೆ ಭೂಮಿಪೂಜೆ.

# ಕಾಮಗಾರಿ ದೀರ್ಘಕಾಲ ಉಳಿಯಬೇಕು ಗುತ್ತಿಗೆದಾರರಿಗೆ ಶಾಸಕ ಗವಿಯಪ್ಪ ಸೂಚನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕಮಲಾಪುರದ ವಾಲ್ಮೀಕಿ ವೃತ್ತದ ಬಳಿಯಿ ರುವ ನೀರು ಸರಬರಾಜು ಕೇಂದ್ರದ ಆವರಣ ದಲ್ಲಿ ಕೇಂದ್ರ ಸರ್ಕಾರದ ಅಮೃತ್ 2.0 ಯೋಜನೆ ಯಡಿ ಕಮಲಾಪುರ ಪಟ್ಟಣಕ್ಕೆ ಸುಧಾರಿತ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗೆ ಶಾಸಕ ಹೆಚ್.ಆರ್.ಗವಿಯಪ್ಪ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ನಗರದಲ್ಲಿ ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕಾಗಿ ಅಮೃತ್ 2.0 ಯೋಜನೆ ಯಡಿ ಕುಡಿಯುವ ನೀರು ಸರಬರಾಜು ಘಟಕ ಆರಂಭವಾಗಲಿದೆ. ಇದರೊಳಗೆ ಪಟ್ಟಣದಲ್ಲಿ ಫೀಡರ್ ಮೇನ್ ಕೊಳವೆ ಮಾರ್ಗ, 10 ಲಕ್ಷ ಲೀಟರ್ ಸಾಮಾರ್ಥ್ಯದ ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ, 6199 ಕಿಲೋ ಮೀಟರ್ ವಿತರಣಾ ಜಾಲಾ ಹಾಗೂ ಪಟ್ಟಣದಲ್ಲಿ ಸುಮಾರು 6000 ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲಾಗುವುದು. ಹಾಲಿ 4.54 ಎಂಎಲ್‌ಡಿ ಸಾಮಾರ್ಥ್ಯದ ಜಲಶುದ್ಧಿಕರಣ ಘಟಕವನ್ನು ನವೀಕರಣಗೊಳಿಸಲಾಗುವುದು. ಒಟ್ಟಾರೆಯಾಗಿ 26.17 ಕೋಟಿ ರೂಗಳ ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ವಿಶೇಷವಾಗಿ ಗುಣಮಟ್ಟದ ಕಾಮಗಾರಿಗೆ ನಿರ್ಮಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು.

ಇದೇ ವೇಳೆ ಕಮಲಾಪುರ ಪುರಸಭೆ ಕಚೇರಿಯಲ್ಲಿನ ನೂತನ 2 ಕಸದ ವಾಹನ, 1 ಜೆಸಿಬಿ ಯಂತ್ರವನ್ನು ಉದ್ಘಾಟಿಸಲಾಯಿತು. ಭೂಮಿಪೂಜೆ ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷ ಗೋಪಾಲಕೃಷ್ಣ, ಸದಸ್ಯರಾದ ಮುಕ್ತಿಯಾರ್ ಪಾಷಾ, ನಾಮನಿರ್ದೇಶಿತ ಸದಸ್ಯರಾದ ಕನ್ನೇಶ್ವರ, ಸೋಮಶೇಖರ್, ಮುಖಂಡರಾದ ಖಾಜಾಹುಸೇನ್, ಮುಖ್ಯಾಧಿಕಾರಿ ಡಿ.ಬಿ.ಈರಣ್ಣ ಇತರರಿದ್ದರು.

# ನಂದಿಹಳ್ಳಿ ಸ್ಕೂಲ್ ಆಫ್ ಮೈನ್ಸ್‌ಗೆ ಧನಬಾದ್ ಐಐಟಿ ಸಹಯೋಗ



■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಸ್ಥಾಪನೆಯಾಗಲಿರುವ ಉದ್ದೇಶಿತ ಸ್ಕೂಲ್ ಆಫ್ ಮೈನ್ಸ್ ಗೆ ಪ್ರತಿಷ್ಠಿತ ಗಣಿಗಾರಿಕಾ ಶಿಕ್ಷಣ ಸಂಸ್ಥೆಯಾಗಿರುವ ಐಐಟಿ ಧನಬಾದ್ ನಿಂದ ಶೈಕ್ಷಣಿಕ ಮತ್ತು ಸಂಶೋಧನಾ ಸಹಯೋಗ ದೊರೆಯಲಿದೆ. ನೂರಕ್ಕೂ ಹೆಚ್ಚು ವರ್ಷಗಳ ಪರಂಪರೆ ಹೊಂದಿರುವ ಈ ಸಂಸ್ಥೆ ತಾಂತ್ರಿಕ ಮಾರ್ಗದರ್ಶನ ನೀಡಲು ಸಮ್ಮತಿಸಿರುವುದಾಗಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ. ಮುನಿರಾಜು ಹೇಳಿದರು.

"ಪ್ರಾಥಮಿಕ ಹಂತವಾಗಿ ಐಐಟಿ ಧನಬಾದ್ ಈ ಯೋಜನೆಗೆ ಸಂಬಂಧಪಟ್ಟ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸಲು ಒಪ್ಪಿಗೆ ನೀಡಿದ್ದು, ಶೀಘ್ರದಲ್ಲೇ ದ್ವಿಪಕ್ಷೀಯ ಒಪ್ಪಂದ ಪತ್ರ (MoU)ಕ್ಕೆ ಸಹಿ ಹಾಕಲಾಗುವುದು. ಈ ಸಭೆಯು ನಂದಿಹಳ್ಳಿ ಸ್ಕೂಲ್ ಆಫ್ ಮೈನ್ಸ್ ಸ್ಥಾಪನೆಯತ್ತ ಮಹತ್ವದ ಹೆಜ್ಜೆಯಾಗಿದೆ". ಈ ಸಂಬಂಧ ಮಹತ್ವದ ಸಭೆಯನ್ನು ಶನಿವಾರ ಬೆಂಗಳೂರಿನ ಕುಮಾರಕೃಪಾ ಅತಿಥಿಗೃಹದಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿತ್ತು. ಕುಲಪತಿಗಳಾದ ಪ್ರೊ. ಎಂ. ಮುನಿರಾಜು ಅವರ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಐಐಟಿ ಧನಬಾದ್‌ನ ನಿರ್ದೇಶಕ ಪ್ರೊ. ಸುಕುಮಾರ ಮಿಶ್ರಾ, ಉಪನಿರ್ದೇಶಕ ಮತ್ತು ಖನಿಜ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ. ಧೀರಜ್ ಕುಮಾರ್, ಪ್ರೊ. ಚೈತನ್ಯ ಶರ್ಮಾ, ಪ್ರೊ. ಪ್ರಬೋಧ ರಂಜನ್ ಸಾಹು, ಡಾ. ಎಜಾಜ್ ಅಹಮದ್ ಹಾಗೂ ನಂದಿಹಳ್ಳಿ ಕೇಂದ್ರದ ನಿರ್ದೇಶಕರಾದ ಪ್ರೊ. ರವಿ ಬಿ., ಖನಿಜ ಸಂಸ್ಕರಣೆ ವಿಭಾಗದ ಪ್ರೊ. ಎಸ್.ಎಂ. ಶಶಿಧರ ಮತ್ತು ಪ್ರೊ. ಪಿ. ಶರತ್ ಕುಮಾರ್ ಭಾಗವಹಿಸಿದರು. ಸಭೆಯಲ್ಲಿ ಸ್ಕೂಲ್ ಆಫ್ ಮೈನ್ಸ್ ಸ್ಥಾಪನೆಯ ದೃಷ್ಟಿಕೋನ, ಉದ್ದೇಶಿತ ಶಾಖೆಗಳು, ಅಧ್ಯಾಪಕರ ವಿನಿಮಯ, ಸಂಶೋಧನಾ ಸಹಕಾರ, ಮತ್ತು ಸಂಡೂರು ಗಣಿಗಾರಿಕಾ ಪ್ರದೇಶದ ಉದ್ಯಮಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಬಗ್ಗೆ ಸಮಗ್ರ ಚರ್ಚೆ ನಡೆಯಿತು ಎಂದು ತಿಳಿಸಿದ್ದಾರೆ.

# ಮೇ.11 ರಂದು ಹೊಸಪೇಟೆಯ ವಿವಿಧೆಡೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ಸಂಕ್ಲಾಪುರದ 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ದುರಸ್ತಿ ಕಾರ್ಯ ಕೈಗೊಳ್ಳ ಬೇಕಾಗಿರುವುದರಿಂದ ಮೇ.11 ರಂದು ಭಾನುವಾರ, ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಎಫ್6 ಸಂಕ್ಲಾಪುರ ಮತ್ತು ಜಂಬುನಾಥ ಗುಡಿ ಮಾರ್ಗಗಳ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಅಡಚಣೆಯಾಗುತ್ತದೆ. ತಾಲೂಕಿನ ಕಾರಿಗನೂರು, ಸಂಕ್ಲಾಪುರ, ಮಾರುತಿ ನಗರ, ಜಂಬುನಾಥ ರಸ್ತೆ ಮತ್ತು ಜಂಬನಾಥ ಗುಡಿ ವ್ಯಾಪ್ತಿಯಲ್ಲಿರುವ ವಿದ್ಯುತ್ ಗ್ರಾಹಕರು ಸಹಕರಿಸಬೇಕೆಂದು ಹೊಸಪೇಟೆ ನಗರ ಉಪವಿಭಾಗದ–2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆರ್. ಹೇಮರೆಡ್ಡಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಣಿಬಾಧಿತ ವಲಯ ಪ್ರದೇಶಗಳ ಮಣ್ಣು, ನೀರಿನ ಸಂರಕ್ಷಣೆ ಅಗತ್ಯ

## CEPMIZ ಯೋಜನೆಯಡಿ ಸಮುದಾಯ ಸಹಭಾಗಿತ್ವ ಕಾರ್ಯಕ್ರಮ



■ **ಹಂಪಿ ಟೈಮ್ಸ್ ಬಳ್ಳಾರಿ**

ಗಣಿಬಾಧಿತ ವಲಯ ಪ್ರದೇಶದ ರೈತರಿಗೆ ತಮ್ಮ ತಮ್ಮ ಜಮೀನುಗಳಲ್ಲಿ ಯಾವ ರೀತಿಯಾಗಿ ಮಣ್ಣು ಮತ್ತು ನೀರಿನ ಸಂರಕ್ಷಣೆ ಮಾಡಬೇಕು, ಸಂರಕ್ಷಣೆಯನ್ನು ಮಾಡಲು ಯಾವ ರೀತಿಯಾಗಿ ಉಪಚಾರ ಕೈಗೊಳ್ಳಬೇಕು ಎಂಬುದರ ಬಗ್ಗೆ ತಿಳಿಸಿಕೊಡುವುದು ಗಣಿಗಾರಿಕೆ ಪ್ರಭಾವಿತ ವಲಯಗಳ ಸಮಗ್ರ ಪರಿಸರ ಯೋಜನೆಯ ಉದ್ದೇಶವಾಗಿದೆ ಎಂದು ಉಪ ಕೃಷಿ ನಿರ್ದೇಶಕ ಮಂಜುನಾಥ್ ಅವರು ಹೇಳಿದರು.

ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಬಳ್ಳಾರಿ ಹಾಗೂ ಗ್ರಾಮ್ಸ್ ಲಿಂಗಸೂಗೂರು ಅನುಷ್ಠಾನ ಸಂಸ್ಥೆಯ ವತಿಯಿಂದ ಗಣಿಗಾರಿಕೆ ಪ್ರಭಾವಕ್ಕೆ ಒಳಗಾದ ವಲಯಗಳಿಗೆ ಸಮಗ್ರ ಪರಿಸರ ಯೋಜನೆ (CEPMIZ) ಅಡಿ ಬಳ್ಳಾರಿ ತಾಲೂಕಿನ ಹಲಕುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹೊನ್ನಾಳಿ ತಾಂಡದಲ್ಲಿ ಗುರುವಾರ ಏರ್ಪಡಿಸಿದ್ದ ಸಮುದಾಯ ಸಹಭಾಗಿತ್ವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ಯೋಜನೆಯು ಗಣಿಗಾರಿಕೆ ಪರಿಣಾಮ ವಲಯಕ್ಕೆ ರಾಜ್ಯದ ನಾಲ್ಕು ಜಿಲ್ಲೆಗಳು ಮೊದಲನೇ ಹಂತದಲ್ಲಿ ಆಯ್ಕೆಯಾಗಿದ್ದು, ಅದರಲ್ಲಿ ಬಳ್ಳಾರಿ ಜಿಲ್ಲೆಯು ಕೂಡ ಒಂದಾಗಿದೆ. ಈ ಯೋಜನೆಯು ಐದು ವರ್ಷದ ಅವಧಿಗೆ ಅನುಷ್ಠಾನ ಮಾಡಲಾಗುವುದು ಎಂದು ತಿಳಿಸಿದರು.

ಈ ಯೋಜನೆಯಡಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ತಮ್ಮ ಮನೆಗಳಿಗೆ ಖುದ್ದಾಗಿ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿ ಅಗತ್ಯವಿರುವ ಮಾಹಿತಿಯ ದಾಖಲೆಗಳನ್ನು ಪಡೆದುಕೊಳ್ಳಲು ಸಮೀಕ್ಷೆ ಮಾಡಲಾಗುತ್ತದೆ. ಹಾಗಾಗಿ ಗ್ರಾಮದ ಎಲ್ಲಾ ರೈತರು ಸರಿಯಾಗಿ ಮಾಹಿತಿ ಕೊಡಬೇಕು ಎಂದು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕ ದಯಾನಂದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಗಣಿಬಾಧಿತ ಪ್ರದೇಶದಲ್ಲಿ ನಾಶ >>3

## ಬಳ್ಳಾರಿಯಲ್ಲಿ ಸಂಭ್ರಮದ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ

# ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಆದರ್ಶ ತತ್ವಗಳನ್ನು ಪಾಲಿಸೋಣ



■ **ಹಂಪಿ ಟೈಮ್ಸ್ ಬಳ್ಳಾರಿ**

ಹೇಮರೆಡ್ಡಿ ಮಲ್ಲಮ್ಮ ಸಾಕ್ಷಾತ್ ಶ್ರೀಶೈಲ ಮಲ್ಲಿಕಾರ್ಜುನನ ಅನುಗ್ರಹಕ್ಕೆ ಪಾತ್ರಳಾದವರು ಸಮಸ್ತ ರೆಡ್ಡಿ ಕುಲದ ಧರ್ಮ ಉದ್ಧಾರ ಮಾಡಲು ಅವತರಿಸಿದ ಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಮೌಲ್ಯ ಮತ್ತು ತತ್ವಗಳ ಮಾರ್ಗದರ್ಶನದಲ್ಲಿ ಸಾಗೋಣ ಎಂದು ವಿಧಾನಪರಿಷತ್ ಸದಸ್ಯರಾದ ವೈ.ಎಂ.ಸತೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪಾರ್ವತಿ ನಗರ ಬಡಾವಣೆಯ ಬಸವ ಭವನ ವೇದಿಕೆ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀಶೈಲ ಮಲ್ಲಿಕಾರ್ಜುನನನ್ನು ಆರಾಧ್ಯ ದೈವವಾಗಿ ಸ್ವೀಕರಿಸಿ, ಸಾಕ್ಷಾತ್ಕರಿಸಿಕೊಂಡ ಸಾಧ್ವಿ ಮಲ್ಲಮ್ಮ ವೇಮನ ಮಹಾಯೋಗಿಯಾಗಿ ಬದಲಾಗಲು ಪ್ರೇರಣೆಯಾದವರು ಎಂದು ಹೇಳಿದರು.

ವೀರಶೈವ ಲಿಂಗಾಯತ ರೆಡ್ಡಿ ಸಮಾಜದ ಅಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಹಾಸಾಧ್ವಿಯಾದ ಹೇಮರೆಡ್ಡಿ ಮಲ್ಲಮ್ಮ ಎಲ್ಲರಿಗೂ ಆದರ್ಶ ಮಹಿಳೆಯಾಗಿದ್ದು, ಭಕ್ತಿ ಮಾರ್ಗದ ಮೂಲಕ ಶ್ರೀಶೈಲ ಮಲ್ಲಿಕಾರ್ಜುನ ದೇವರ ಮಹಿಮೆ ನಾಡಿಗೆ ಸಾರಿದ್ದಾರೆ. ಇಂದಿಗೂ ಕೂಡ ಆಂದ್ರಪ್ರದೇಶದ ಶ್ರೀಶೈಲ ಕ್ಷೇತ್ರದಲ್ಲಿ ಕಣ್ಣಿರು ಎಂಬ ಸ್ಥಳದಲ್ಲಿ ಹೇಮರೆಡ್ಡಿ ಮಲ್ಲಮ್ಮ ಅವರ ದೇವಸ್ಥಾನವನ್ನು ನೋಡಬಹುದು ಎಂದರು.

ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಅಧ್ಯಾಪಕಿ ಸುಶೀಲ ಸಿರೂರು ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, 15ನೇ ಶತಮಾನದ ಪ್ರಸಿದ್ಧ >>4

## ಆನಂದ ಬಾಣ

"ಎಸ್ ಎಸ್ ಎಲ್ ಸಿ ಪರೀಕ್ಷೆ "
ಮಾತೃಭಾಷೆಯಲ್ಲಿ 1.32 ಲಕ್ಷ
ಮಂದಿ ನಪಾಸು
"ಕನ್ನಡ "ಕಬ್ಬಿಣದ ಕಡಲೆ



# ಬೆಳಕಿನ ಹಾದಿ

## ವಿಧಿಯಾಟ

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ಸಹನಾ 25 ವರ್ಷದ ಯುವತಿ. ತಂದೆ-ತಾಯಿ ಯಾರೂ ಇಲ್ಲದೇ ಅನಾಥಾಶ್ರಮದಲ್ಲಿ ಬೆಳೆದವಳು. ಓದಿನಲ್ಲಿ, ಆಟೋಟಗಳಲ್ಲಿ ಎಲ್ಲದರಲ್ಲೂ ಮುಂದು. ತುಂಬ ಸುಂದರವಾದ ಹುಡುಗಿ. ಆದಿತ್ಯ ಎಂಬ ಹುಡುಗ ಅಗರ್ಭ ಶ್ರೀಮಂತ. ಪ್ರತಿಷ್ಟಿತ ಮನೆತನದ ಹುಡುಗ. ಆದಿತ್ಯ ಸಹನಾಳ ಸೌಂದರ್ಯಕ್ಕೆ ಮನಸೋತು ಪ್ರೀತಿಯ ನಿವೇದನೆ ಮಾಡಿಕೊಂಡ. ಸಹನಾ ಅದನ್ನು ಒಪ್ಪಲಿಲ್ಲ. ನಿಮ್ಮ ಅಂತಸ್ತಿಗೆ ತಕ್ಕ ಹೆಣ್ಣು ನಾನಲ್ಲ ಎಂದು ತಿರಸ್ಕರಿಸಿದಳು. ಆದರೆ ಆದಿತ್ಯನಿಗೆ ಅವಳ ಮೇಲೆ ತುಂಬಾ ಮನಸ್ಸಾಗಿರುತ್ತದೆ. ಆದರೆ ಅವನು ಬಣ್ಣ ಬಣ್ಣದ ಮಾತುಗಳಿಂದ ಅವಳನ್ನು ಒಪ್ಪಿಸುತ್ತಾನೆ. ಅವನ ಮಾತುಗಳಿಗೆ ಹಾಗೂ ಅವನ ಐಶ್ವರ್ಯಕ್ಕೆ ಮನಸೋತ ಸಹನ ಒಪ್ಪಿಗೆ ಸೂಚಿಸುತ್ತಾಳೆ. ಮನೆಯವರನ್ನು ಒಪ್ಪಿಸಿ ಮದುವೆಯಾಗುತ್ತೇನೆ ನಿನ್ನ ಕೈಬಿಡಲ್ಲ ಎಂದು ಮಾತು ಕೊಟ್ಟು ಸಹನಾಳ ಜೊತೆಗೆ ಸ್ವಚ್ಛಂಧ ಹಕ್ಕಿಗಳಂತೆ ಹಾರಾಡುತ್ತಿರುತ್ತಾರೆ.

ಒಂದು ದಿನ ಸಹನಾಳನ್ನು ಪಾರ್ಕಿಗೆ ಕರೆದು, 'ಮನೆಯಲ್ಲಿ ಮದುವೆ ಮಾತುಕತೆ ನಡೆಯುತ್ತಿದೆ. ನಮ್ಮ ಮದುವೆಗೆ ಒಪ್ಪಿಗೆ ಕೊಡುತ್ತಿಲ್ಲ. ನನ್ನನ್ನು ಮರೆತುಬಿಡು' ಎಂದು ಹೇಳಿ ಹೋಗಿಬಿಟ್ಟನು. ಆ ಮಾತುಗಳನ್ನು ಕೇಳಿ ಭೂಮಿ ಕಂಪಿಸಿದಂತೆ ಆಯಿತು. ಆದಿತ್ಯನ ಮಾತುಗಳನ್ನು ಕೇಳಿ ಜೀವವೇ ಹೋದಂತಾಯಿತು. ಗಲಾಟೆ ಮಾಡಿದರೆ ಪ್ರಯೋಜನವಿಲ್ಲ ಎಂದು, ಒತ್ತಾಯದ ಮದುವೆಯಿಂದ ಇಬ್ಬರ ಜೀವನ ಹಾಳಾಗುತ್ತದೆ ಎಂದು ತನಗೆ ತಾನೆ ಸಮಾದಾನ ಮಾಡಿಕೊಂಡಳು.



ಒಂದು ದಿನ ಮನೆಯ ಮುಂದೆ ಒಂದು ಕಾರು ಬಂತು. ಆದಿತ್ಯನ ತಾಯಿ ತಾರಾದೇವಿ ಬಂದು ನನ್ನ ಮಗನನ್ನು ಮರೆತುಬಿಡು. ನಿನಗೆ ಏನು ಯೋಗ್ಯತೆ ಇದೆ ಎಂದು ನನ್ನ ಮಗನ ಮದುವೆ ಮಾಡಿಕೊಳ್ಳುತ್ತೀಯ ಎಂದು ಬಯ್ದು ಎಚ್ಚರಿಕೆ ಕೊಟ್ಟು ಹೋದಳು.

ಸಹನಾ ಇದೆಲ್ಲವನ್ನು ಮರೆತು ತನ್ನ ಕೆಲಸದೊಂದಿಗೆ ಅನಾಥಾಶ್ರಮ, ವೃದ್ಧಾಶ್ರಮದಲ್ಲಿ ಸ್ವಯಂ ಸೇವಕಿಯಾಗಿ ಸೇವೆ ಸಲ್ಲಿಸುತ್ತಿದ್ದಳು. ತುಂಬಾ ದಿನಗಳ ನಂತರ ವೃದ್ಧಾಶ್ರಮದಲ್ಲಿ ತಾರಾದೇವಿಯನ್ನು ನೋಡಿ ಶಾಕ್ ಆದಳು. ಆದಿತ್ಯ ಮದುವೆಯ ನಂತರ ತನ್ನ ತಾಯಿಯನ್ನು ತುಂಬಾ ಕ್ರೂರವಾಗಿ ನಡೆಸಿಕೊಂಡಿರುವ ವಿಷಯ ಕೇಳಿ ಮರುಗಿದಳು. ಹೆಂಡತಿಯ ಮಾತು ಕೇಳಿ ಹೆತ್ತ ತಾಯಿಯನ್ನು ವೃದ್ಧಾಶ್ರಮಕ್ಕೆ ಕಳಿಸಿ ಕೈತೊಳೆದುಕೊಂಡಿದ್ದನು. ತಾಯಿ ಹುಡುಕಿ ತಂದ ಹುಡುಗಿಯಾದರೂ ಅತ್ತೆಯನ್ನು ಮನೆಯಿಂದ ಹೊರಹಾಕಿದ್ದಳು. ತಾರಾದೇವಿಯ ಕತೆಯನ್ನು ಕೇಳಿದ ಸಹನ ತುಂಬಾ ನೊಂದುಕೊಂಡಳು. ತಾರಾದೇವಿ ಸಹನಾಳ ಮಡಿಲಲ್ಲಿ ಮಗುವಿನಂತೆ ಮಲಗಿ ಬಿಕ್ಕಿ ಬಿಕ್ಕಿ ಅತ್ತಳು. ನಿನ್ನಂತಹವಳನ್ನು ಬಿಟ್ಟು ಬೇರೆ ಹುಡುಗಿ ಜೊತೆ ಮದುವೆ ಮಾಡಿದೆ ತಪ್ಪು ಮಾಡಿದೆ. ಅದಕ್ಕೆ ಆ ದೇವರು ಕೊಟ್ಟ ಶಿಕ್ಷೆ ಇದು. ನನ್ನನ್ನು ಕ್ಷಮಿಸು ಎಂದು ಕೈಮುಗಿದು ಕ್ಷಮೆ ಯಾಚಿಸಿದಳು. ಇದೇ ಅಲ್ಲವೇ ವಿಧಿಯಾಟ?

ಇದೊಂದು ನೈಜ ಘಟನೆ. ಇಂತಹ ಅದೆಷ್ಟೋ ಘಟನೆಗಳು ನಮ್ಮ ಸುತ್ತಮುತ್ತ ನಡೆಯುತ್ತಲೇ ಇರುತ್ತವೆ. ಆದರೆ ನಾವು ಅವುಗಳಿಂದ ಪಾಠ ಕಲಿಯುತ್ತಲೇ ಇಲ್ಲ. ನಮ್ಮ ಅಂತರಂಗದ ಕಣ್ಣಿಗೆ ಆವರಿಸಿದ ಅಜ್ಞಾನದ ಪೊರೆಯನ್ನು ಕಳಚಿದಾಗ ಮಾತ್ರ ಮಾನವೀಯತೆಯ ಪ್ರಜ್ಞೆ ಉದ್ದೀಪನಗೊಳ್ಳುತ್ತದೆ. ಆಗ ಮಾತ್ರ ನಾವು ಮನುಜರಾಗುತ್ತೇವೆ. ಇಲ್ಲದಿದ್ದರೆ ತಾರಾದೇವಿಯಂತೆ ನಮ್ ಜೀವನಕ್ಕೆ ನಾವೇ ಮುಳುವಾಗುತ್ತೇವೆ. ಅಲ್ಲವೇ?.


## ನಿಮ್ಮ ಬೆಂಬಲವೇ ನಮ್ಮ ಬಲ

ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.


-: ಸಂಪಾದಕರು :-

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

ಇ-ಮೇಲ್:hampitimes@gmail.com

M: 94486 33038



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


ಧರ್ಮದ ಮೇಲಾಟ ನಮ್ಮಲ್ಲಿ ಹೊಸದೇನೂ ಅಲ್ಲ ಆದರೆ ಅಂತಹ ಸಂದರ್ಭಗಳಲ್ಲಿ ಹಿಂಸೆ, ರಕ್ತಪಾತದ ಬದಲಾಗಿ ಉತ್ಕೃಷ್ಟವಾದ ಕಾವ್ಯಗಳು ಮೂಡಿ ಬಂದಿವೆ. ಕುಮಾರವ್ಯಾಸಭಾರತದ ನಂತರ ಪ್ರಭುಲಿಂಗಲೀಲೆಯೂ, ಜೈಮಿನಿಭಾರತದ ನಂತರ ಚೆನ್ನಬಸವ ಪುರಾಣವೂ ರಚನೆಯಾದದ್ದು ಇಂತಹ ಸಂದರ್ಭಗಳಲ್ಲಿಯೇ

### ದೇಶದ ಅಂತಃಸತ್ವವೂ, ಪರಂಪರೆಯೇ ನಮ್ಮ ಹೆಮ್ಮೆ

# ಧರ್ಮ ಮತ್ತು ಸರತಿ ಸಾಲು



ಭಾರತೀಯ ಸಾಹಿತ್ಯದಲ್ಲಿ ಸರತಿಯ ಸಾಲಿಗೆ ಒಂದು ವಿಶೇಷತೆ ಇದೆ. ಬಹುತೇಕ ಕವಿಗಳು ಇದನ್ನು ಕೇವಲ ತಂತ್ರವಾಗಿ ಬಳಸದೆ, ಅದಕ್ಕೂ ಮೀರಿದ ತಮ್ಮ ಧಾರ್ಮಿಕ ತತ್ವಗಳನ್ನು ಹೇಳಲು ಯತ್ನಿಸಿದ್ದಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸರತಿಯ ಪ್ರಕಾರ ಎಲ್ಲವನ್ನೂ ಪಡೆಯಬೇಕು ಎನ್ನುವುದು ಸಾಮಾಜಿಕವಾಗಿ ಹಾಗೂ ನಾಗರಿಕ ಧರ್ಮವಾಗಿ ಒಪ್ಪಿತವಾದದ್ದು. ಶಕ್ತಿ ರಾಜಕಾರಣ ಹಾಗೂ ವೈರಾಗ್ಯದಂತಹ ಸಂಗತಿಗಳನ್ನು ಹೊರತುಪಡಿಸಿದರೆ ನಮ್ಮ ಸಮಾಜವು ಉದ್ದಕ್ಕೂ ಇದಕ್ಕೆ ಬದ್ಧವಾಗಿದೆ. ಒಳ್ಳೆಯದಾದ ಹಾಗೂ ಒಳ್ಳೆಯದಲ್ಲದ ಎಲ್ಲವನ್ನೂ ಸರತಿಯಲ್ಲಿ ಪಡೆಯುವ ಅನಿವಾರ್ಯತೆಯನ್ನು ಧರ್ಮವು ಎತ್ತಿ ಹಿಡಿಯುತ್ತದೆ.

ಸಾವು ಎಂಬ ಅಂತಿಮ ಬಿಂದು ಅರಿವಿಲ್ಲದೇ ಬಂದೊದಗಿದರೆ ಅದು ಆ ಜೀವಿಗೆ ನೆಮ್ಮದಿಯ ಅಂತ್ಯವಾಗುತ್ತದೆ. ಸಾವಿನ ಕ್ಷಣವನ್ನು ಮೊದಲೇ ನಿರ್ಧರಿಸಿ ಸಿದ್ಧವಾಗಿರಲು ಹೇಳುವುದು ಇಲ್ಲಿಯೇ ನರಕವನ್ನು ಸೃಷ್ಟಿಸಿದಂತಹ ಅನುಭವ ನೀಡುತ್ತದೆ. ಸಾವಿನ ನಿಗೂಢತೆ ಹಾಗೆಯೇ ಉಳಿಯಬೇಕು ಇಲ್ಲವಾದರೆ ಅದು ಹಿಂಸೆಯ ಪರಮಾವಧಿಯನ್ನು ತಲುಪುತ್ತದೆ. ಸಾವನ್ನು ಸರತಿಯ ಸಾಲಿನಲ್ಲಿ ಪಡೆಯುವ, ಅದನ್ನು ಎದುರಿಸುವ, ಗೆಲ್ಲುವ ಅದ್ಭುತ ರೋಮಾಂಚಕ ಸಂಗತಿಗಳನ್ನು ಅತ್ಯಂತ ಕಲಾತ್ಮಕವಾಗಿ ಕುಸುರಿ ಕೆಲಸದೊಂದಿಗೆ ನಮ್ಮ ಪೂರ್ವಸೂರಿಗಳು ನಿರ್ವಹಿಸಿದ್ದಾರೆ.

ಮಹಾ ಭಾರತದಲ್ಲಿನ 'ಬಕಾಸುರನ ವಧೆ', ಪಂಚತಂತ್ರದ 'ಮೊಲಂ ಸಿಂಹಮಂ ಕೊಂದ ಕಥೆ' ಹಾಗೂ ಶ್ರೀನಾಗಾನಂದನ ಒಳಗಿನ 'ಜೀಮೂತವಾಹನನ ಕಥೆ'ಗಳು ಕವಿಗಳ ರೂಪಕ ಶಕ್ತಿಗೆ ಸಾಕ್ಷಿಯಾಗಿವೆ. ಸರತಿಯ ಸಾಲಿನಲ್ಲಿ ಸಾವನ್ನು ಪಡೆದು ಅದನ್ನು ಗೆಲ್ಲುವ, ಆ ಸಮಸ್ಯೆಯನ್ನು ಪರಹರಿಸುವ ಜಾಣ್ಮೆ ಇಲ್ಲಿ ಓದುಗನಿಗೆ ಹೊಸದೊಂದು ಆಯಾಮವನ್ನು ತೋರಿಸುತ್ತದೆ.

ಬಕಾಸುರನ ಕಥೆ ಹಾಗೂ ಪಂಚತಂತ್ರದ ಕಥೆಗಳು ಅಸುರೀ ಶಕ್ತಿಯ ಮೇಲೆ ಸಾತ್ವಿಕ ಶಕ್ತಿ ಗಳಿಸಿದ ಜಯದಂತೆ, ಧರ್ಮದ ಜಯದಂತೆ ಬಿಂಬಿತವಾಗಿವೆ. ವೈದಿಕ ಧರ್ಮದ ಮೂಲ ಆಶಯಗಳನ್ನು ಈಡೇರಿಸುವಲ್ಲಿ ಈ ಎರಡೂ ಕೃತಿಗಳು ಶಕ್ತವಾಗಿವೆ ಹಾಗೂ ಸಫಲವಾಗಿವೆ. ಆದರೆ ಜೀಮೂತವಾಹನನ ಕಥೆಯಲ್ಲಿ ದೈವದ ಮೇಲೆ ತ್ಯಾಗದ, ಮಾನವೀಯತೆಯ ಜಯದಂತೆ ಚಿತ್ರಿಸಲಾಗಿದೆ. ಬೌದ್ಧ ಪಂಡಿತ ಚಕ್ರವರ್ತಿ ಶ್ರೀಹರ್ಷನು ತನ್ನ ಧರ್ಮವು ಶಕ್ತಿ, ಯುಕ್ತಿ, ದೈವ ಬಲಕ್ಕಿಂತ ಹೆಚ್ಚಾಗಿ 'ಮಾನವನಲ್ಲಿ ಅಡಕವಾಗಿರುವ ಸಾತ್ವಿಕ ಗುಣಗಳೇ ಸರ್ವ ಶ್ರೇಷ್ಠ ಎಂಬುದನ್ನು ವಿಷದಪಡಿಸುತ್ತದೆ. ಎಂಬ ವಾದವನ್ನು ಅತ್ಯಂತ ಸಮರ್ಥವಾಗಿ ಮಂಡಿಸಿದ್ದಾನೆ. ಬುದ್ಧದೇವನ ತತ್ವಗಳು ಅಸುರರ ವಿರುದ್ಧವಷ್ಟೇ ಅಲ್ಲ, ಅಧರ್ಮವನ್ನಾಚರಿಸುವ ದೈವದ ವಿರುದ್ಧವೂ ಜಯ ಸಾಧಿಸಬಲ್ಲವು ಎನ್ನುವ ಒಳವಿನ್ಯಾಸವನ್ನು ಸಮರ್ಥವಾಗಿ ತೋರಿಸಿದ್ದಾನೆ. ಧರ್ಮದ ಮೇಲಾಟದಲ್ಲಿ ಸಾಹಿತ್ಯ ಕೃತಿಗಳು ವಹಿಸುವ ಮಹತ್ವದ ಪಾತ್ರವನ್ನು ಸರಿಯಾಗಿ ನಾವು ಗ್ರಹಿಸಬೇಕಾಗುತ್ತದೆ. ನಿರೀಶ್ವರವಾದದ ಬೌದ್ಧಧರ್ಮವು ಇತರ ಧರ್ಮಗಳನ್ನು ಎದುರಿಸಲು ಮಾನವನಲ್ಲಿನ ಒಳ್ಳೆಯತನವನ್ನೇ ಪ್ರಧಾನ ಅಸ್ತ್ರವಾಗಿ ಬಳಸಿತು.

ಬಕಾಸುರನ ಕಥೆಯಲ್ಲಿ ಅವನೊಬ್ಬ ರಾಕ್ಷಸ. ಆತನು ಎರಗಿ ಬೀಳುವುದು ಏಕಚಕ್ರಪುರವೆಂಬ ಅಗ್ರಹಾರದ ಮೇಲೆ. ಬಕಾಸುರನಿಂದಾಗಿ ಸರದಿಯ ಪ್ರಕಾರ ಸಾವನ್ನು ಪಡೆಯುವ ದುರ್ದೈವಿಗಳ ನೆರವಿಗೆ ಯಾರೂ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಬಕಾಸುರನನ್ನು ಎದುರಿಸುವ ಶಕ್ತಿ ಯಾರಿಗೂ ಇರಲಿಲ್ಲ. ಅದಕ್ಕಾಗಿ ದಿನಕ್ಕೆ ಒಬ್ಬ ವ್ಯಕ್ತಿ ಒಂದು ಬಂಡಿ ಆಹಾರದೊಂದಿಗೆ ಹೋಗಿ ಅವನಿಗೆ ಆಹಾರವಾಗಬೇಕಿತ್ತು. ದೈವ ನಿಯಮವೆಂದೋ, ವಿಧಿಲೀಲೆಯೆಂದೋ ಒಪ್ಪಿಕೊಂಡು ಬಂದಿದ್ದವರಿಗೆ ಕೊನೆಗೂ ರಾಕ್ಷಸನನ್ನು ಎದುರಿಸುವ ದೈವೀ ಪುರುಷನೊಬ್ಬನ ಸಹಾಯ ದೊರೆಯುತ್ತದೆ. ವಾಯುಪುತ್ರ ಭೀಮಸೇನನು ಬಕಾಸುರ ಎಂಬ ರಾಕ್ಷಸನನ್ನು ತನ್ನ ದೈಹಿಕ, ದೈವಿಕ ಬಲದಿಂದ ನಿವಾರಿಸುತ್ತಾನೆ ಹಾಗಾಗಿ ಅಸುರೀಶಕ್ತಿಯ ವಿರುದ್ಧ ದೈವ ಶಕ್ತಿಯ ಮೇಲ್ಮೆಯನ್ನು ಪುನರ್ ರೂಪಿಸುತ್ತಾನೆ. ರಾಜನೇ ದೈವ ಎಂಬುದಕ್ಕೆ ಸಾಕ್ಷಿಯಾಗಿ ಭೀಮಸೇನ ಎಂಬ ರಾಜನ ಸಾಮರ್ಥ್ಯದ ಪ್ರದರ್ಶನವೂ ಆಗುತ್ತದೆ. ಅರಣ್ಯದಲ್ಲಿ ಪ್ರಾಣಿಯಂತೆ ವಾಸಿಸುವ ಬಕಾಸುರನು ದುಷ್ಟ ಪಾತ್ರವನ್ನು ವಹಿಸಿ ಅಸುರೀಶಕ್ತಿಯ ಪ್ರತೀಕವಾಗುತ್ತಾನೆ. ಇಲ್ಲಿ ಸರತಿಯ ಸಾಲನ್ನು ಮುರಿದು ಒಳ್ಳೆಯದನ್ನು ಮಾಡಲು ದೈವವೇ ಸಹಾಯ ಒದಗಿಸುತ್ತದೆ.



ಬಿ.ಎಂ.ರಾಜಶೇಖರ, ಶಿಕ್ಷಕರು
M:9900705323
Scan For Digital Colourful
HAMPI TIMES E-paper

ಪಂಚತಂತ್ರದಲ್ಲೂ ಇದೇ ತಂತ್ರವನ್ನು ಬಳಸಲಾಗಿದೆ. ಆದರೆ ಇಲ್ಲಿ ಮೊಲಕ್ಕೆ ಸಹಾಯ ಒದಗುವುದು ತನ್ನ ಬುದ್ಧಿಶಕ್ತಿಯಿಂದ. ಕಾಶ್ಮೀರದ ಕವಿ ವಿಷ್ಣುಶರ್ಮನು (ಕ್ರಿ.ಪೂ 1200) ಈ ಕೃತಿ ಯನ್ನು ಸಂಸ್ಕೃತದಲ್ಲಿ ರಚಿಸಿ ಭಾರತದ ಶ್ರೇಷ್ಠ ಕವಿ ಎನಿಸಿ ಕೊಂಡನು. ವೇದ ವ್ಯಾಸನಿಂದ ವಿಷ್ಣುಶರ್ಮನ ಕಾಲಕ್ಕೆ ದೈಹಿಕ ಶಕ್ತಿಗಿಂತ ಬುದ್ಧಿ ಶಕ್ತಿಯ ಮೇಲ್ಮೆ ಜನಜನಿತ ವಾಗಿತ್ತು. "ಧಿಯೋ ಯೋನ: ಪ್ರಚೋದಯಾತ್" ಎಂಬ ಋಗ್ವೇದದ ಉಕ್ತಿಗೆ ಶಕ್ತಿ ಯನ್ನೊದಗಿಸಲು ಇಂತಹ ಕಥನಗಳ ಯಶಸ್ವೀ ತಂತ್ರಗಳನ್ನು ಬಳಸಿದರು. ಹಾಗೆ ನೋಡಿದರೆ ಇಡೀ ಪಂಚತಂತ್ರವೇ ಬುದ್ಧಿಶಕ್ತಿಯ ಮೇಲ್ಮೆಯ ಕಥನವಾಗಿದೆ. ಅಸುರೀ ಶಕ್ತಿಯ ಭೂಸುರಕ ಎಂಬ ಸಿಂಹವು ಸರತಿಯ ಪ್ರಕಾರ ಆಹಾರವಾಗಿ ಸ್ವೀಕರಿಸಿ ಕಾಡಿನ ಪ್ರಾಣಿಗಳಿಗೆಲ್ಲ ಉಪಕಾರ ಮಾಡುತ್ತೇನೆ ಎನ್ನುತ್ತದೆ. ಎದುರಿಗೆ ಕಾಣುವ ಈ ಸಾವಿನ ಭಯವನ್ನು ನಿವಾರಿಸಿಕೊಳ್ಳಲು ದೀರ್ಘಕರ್ಣ ಎಂಬ ಮೊಲವು ತನ್ನ ಬುದ್ಧಿಶಕ್ತಿಯ ನೆರವನ್ನು ಪಡೆಯುತ್ತದೆ. ರಾಕ್ಷಸನ ಪ್ರತೀಕವಾದ ಸಿಂಹವನ್ನು ಸಾತ್ವಿಕ ರೂಪದ ಮೊಲವು ಕೊಂದು ಹಾಕುತ್ತದೆ. ಪ್ರಾಚೀನರ ಆಯುಧ ಶಕ್ತಿಗಿಂತ ದೈವೀಶಕ್ತಿಯ ಬಲ ಹಾಗೂ ಬುದ್ಧಿಶಕ್ತಿಯ ಬಲಕ್ಕೆ ಸಾಕ್ಷಿಯಾಗಿ ಇಂತಹ ಕಥನಗಳು ಗಟ್ಟಿಯಾದವು. ಸರತಿಯ ಸಾಲನ್ನು ಭೇದಿಸಲು ವೇದ ಧರ್ಮದ ಆಧುನಿಕ ಉಪಕರಣಗಳೇ ಮತ್ತೆ ಬಳಕೆಯಾದವು. ದೈಹಿಕ ಶಕ್ತಿಗಿಂತ ಬುದ್ಧಿಶಕ್ತಿಯೇ ಮಿಗಿಲು ಎನ್ನುವುದನ್ನು ಇಲ್ಲಿ ಸಾಧಿಸಲಾಯಿತು.

ಈ ಎಲ್ಲ ಹಿನ್ನೆಲೆಯಲ್ಲಿ ಇದೇ ಸರತಿಸಾಲಿನ ಸಮಸ್ಯೆಯನ್ನು ನಿವಾರಿಸಲು ಬೌದ್ಧಧರ್ಮದ ತಂತ್ರವನ್ನು ನೋಡುವುದು ಅವಶ್ಯಕ. ವೈದಿಕರು ರಾಕ್ಷಸರ ವಿರುದ್ಧ ಸಾತ್ವಿಕರನ್ನು ಮುಖಾಮುಖಿಯನ್ನಾಗಿ ಮಾಡಿದರು. ಆದರೆ ಬೌದ್ಧರು ಅಸುರೀಶಕ್ತಿಯ ವಿರುದ್ಧ ಮಾನವತೆಯನ್ನು ಮುಖಾಮುಖಿಯನ್ನಾಗಿ ಮಾಡಿದರು. ಮಹಾ ವಿಷ್ಣುವಿನ ವಾಹನ ಗರುಡನು ನಾಗಗಳಿಗೆ ವಿಧಿಸಿದ ಸರತಿ ಸಾಲಿನ ಸಾವಿನ ಸರಪಳಿಯನ್ನು ಕತ್ತರಿಸಿದ್ದು ಮಾನವನಲ್ಲಿನ ಪ್ರೀತಿ, ದಯೆ, ಪರೋಪಕಾರ, ತ್ಯಾಗ ಮುಂತಾದ ಉನ್ನತ ಮಾನವೀಯ ಮೌಲ್ಯಗಳು. ಇದು ಬೌದ್ಧಧರ್ಮದ ಮೂಲ ಆಶಯವೂ ಹೌದು. ಇತರೇ ಧರ್ಮಗಳಿಗೆ ಮುಖಾಮುಖಿಯಾದ ಬೌದ್ಧವು ತನ್ನ ಸತ್ವವನ್ನು ಸಾರಲು, ಪರೀಕ್ಷಿಸಿಕೊಳ್ಳಲು, ತನ್ನ ಹಿರಿಮೆಯನ್ನು ಸಾಧಿಸಲು ಇಂತಹ ಅದ್ಭುತ ರೂಪಕಗಳ ಮೊರೆ ಹೋಗುವುದು ಅನಿವಾರ್ಯವಾಗಿತ್ತು.

ಮೊದಲೆರೆಡು ಕಥೆಗಳಲ್ಲಿ ಹಿಂಸೆಗೆ ಹಿಂಸೆಯೇ ಉತ್ತರವಾಗಿತ್ತು. ಅಸುರೀಶಕ್ತಿಯ ಸಾವಿನಲ್ಲಿ ಎಲ್ಲವೂ ಮುಕ್ತಾಯವಾಗುತ್ತಿತ್ತು. ಇಲ್ಲಿ ಹಿಂಸೆಗೆ ಎದುರಾಗಿ ಅಹಿಂಸೆಯನ್ನು ನಿಲ್ಲಿಸಿ ಗೆಲುವು ಪಡೆಯುವ ವಿನೂತನ ತಂತ್ರವನ್ನು ಬಳಸಲಾಯಿತು. ಇದು ಕೇವಲ ಸಾಹಿತ್ಯ ನಿರ್ಮಿತಿಯ ತಂತ್ರವಷ್ಟೇ ಆಗಿರದೆ ಮಾನವತೆ ಸಾಗಬೇಕಾದ ಹೊಸ ದಿಕ್ಕನ್ನೂ ಸೂಚಿಸಿತು.

ಶಕ್ತ ದೇವತೆ ಗರುಡನು ದಿನಕ್ಕೊಂದು ನಾಗನನ್ನು ಆಹಾರವಾಗಿ ಸ್ವೀಕರಿಸುವ ಮೂಲಕ ಅಲ್ಲೊಂದು ಸರತಿಸಾಲನ್ನು ನಿರ್ಮಿಸುತ್ತಾನೆ. ಕಾಪಾಡಬೇಕಾದ ದೈವ ವಿಚಿತ್ರವಾಗಿ ವರ್ತಿಸುತ್ತದೆ. ಪ್ರತಿ ದಿನ ಗೊತ್ತಾದ ಸ್ಥಳದಲ್ಲಿ ಬಲಿಯಾಗುವ ನಾಗನು ಕೆಂಪು ವಸ್ತ್ರವನ್ನು ಹೊದ್ದು ಮಲಗಬೇಕಿತ್ತು. ಆ ಸಮಯಕ್ಕೆ ಸರಿಯಾಗಿ ಬರುವ ಗರುಡನು ಕೆಂಪು ವಸ್ತ್ರವನ್ನು ಹೊದ್ದವನನ್ನು ತನ್ನ ಕೊಕ್ಕಿನಲ್ಲಿ ಕಚ್ಚಿಕೊಂಡು ಕೋಡುಗಲ್ಲಿನ ಮೇಲಕ್ಕೆ ಒಯ್ದು ಅಲ್ಲಿ ತಿಂದು ಹಾಕುತ್ತಿತ್ತು.

ಕಥಾ ನಾಯಕ ಜೀಮೂತವಾಹನನಿಗೆ ಇದನ್ನು ತಿಳಿದು ಆಶ್ಚರ್ಯವೂ, ಆ ನಾಗರ ಕುರಿತು ದಯೆಯೂ ಉಂಟಾಗುತ್ತದೆ. ಆ ಪ್ರದೇಶದಲ್ಲಿ ಇದನ್ನೇ ಚಿಂತಿಸುತ್ತಾ ಇದ್ದಾಗ ಆ ದಿವಸ ಬಲಿಯಾಗಲು ಹೊರಟ ಶಂಖಚೂಡ ಎಂಬ ಯುವಕನ ತಾಯಿಯ ಕರುಳ ಆಕ್ರಂದನ ಕೇಳಿ ಬರುತ್ತದೆ. ಶಂಖಚೂಡನ ಬಳಿಗೆ ಹೋದ ಜೀಮೂತವಾಹನನು ನಿನ್ನ ಬದಲಾಗಿ ನಾನು ಬಲಿಯಾಗಲು ಹೋಗುತ್ತೇನೆ. ನನಗೆ ಆ ಕೆಂಪು ವಸ್ತ್ರವನ್ನು ನೀಡು ಎನ್ನುತ್ತಾನೆ. ಶಂಖಚೂಡನು ಇದಕ್ಕೆ ಒಪ್ಪದೇ ತಾನೇ ಬಲಿಯಾಗಲು ಸಿದ್ಧನಾಗುತ್ತಾನೆ. ಅಂತಿಮವಾಗಿ ದೇವರ ದರ್ಶನಕ್ಕೆಂದು ದೇವಾಲಯಕ್ಕೆ ತರಳುತ್ತಾನೆ. ಆ ತಾಯಿಯ ಗೋಳಾಟವನ್ನು ನೋಡಲಾಗದೇ ಜೀಮೂತವಾಹನನು ಆ ವೃದ್ಧೆಯ ಮಗನನ್ನು ಉಳಿಸಲು ತೀರ್ಮಾನಿಸಿ ತಾನೇ ಬಲಿಯಾಗಲು ಹೊರಡುತ್ತಾನೆ. ಕೆಂಪು ವಸ್ತ್ರವನ್ನು ಹೊದ್ದು ಆ ಸ್ಥಳದಲ್ಲಿ ಮಲಗುತ್ತಾನೆ. ಗರುಡನು ಅಲ್ಲಿಗೆ ರಭಸದಿಂದ ಬಂದು ಜೀಮೂತವಾಹನನನ್ನು ಎತ್ತಿಕೊಂಡು ಕೋಡುಗಲ್ಲಿನ ಮೇಲೆ ಹೋಗಿ ತಿನ್ನಲು ಆರಂಭಿಸುತ್ತಾನೆ.

ಜೀವ ಎಷ್ಟು ಅಮೂಲ್ಯ ಎಂಬುದನ್ನು ಪ್ರತಿಪಾದಿಸಲು ಪ್ರತಿ ಹಿಂಸೆಗೆ ಮನಸ್ಸು ಮಾಡದೇ, ಅಹಿಂಸೆಯಿಂದಲೇ ಎದುರಿಸಲು ಸಿದ್ಧನಾಗುತ್ತಾನೆ. ತ್ಯಾಗ, ಅಹಿಂಸೆ, ಪರೋಪಕಾರ, ಕರುಣೆ, ಮಾನವೀಯತೆ ಎಂಬ ಅದ್ಭುತ ಗುಣಗಳ ಸತ್ವವನ್ನು ಎತ್ತಿ ಹಿಡಿಯಲು ತನ್ನ ಜೀವವನ್ನೇ ಬಲಿಕೊಡಲು ಸಿದ್ಧನಾಗುತ್ತಾನೆ. ಎಲ್ಲರಲ್ಲಿಯ ಅಸುರೀಶಕ್ತಿಯ ನಿವಾರಣೆಗೆ ಬುದ್ಧನಂತಹ ತತ್ವಜ್ಞಾನಿಯ ವಿಚಾರಗಳು ಎಷ್ಟು ಪರಿಣಾಮಕಾರಿ ಆಗಿವೆ ಎಂಬುದನ್ನು ಹೇಳಲು ಚಕ್ರವರ್ತಿ ಶ್ರೀಹರ್ಷನು ಇಲ್ಲಿ ಕಥನ ತಂತ್ರವನ್ನು ಚೆನ್ನಾಗಿಯೇ ಬಳಸಿದ್ದಾನೆ.

ಜೀಮೂತವಾಹನನು ನಾಗನಲ್ಲ ಎಂದು ಗರುಡನಿಗೆ ಸ್ವಲ್ಪ ಹೊತ್ತಿನಲ್ಲಿ ತಿಳಿಯುತ್ತದೆ. ಅನ್ಯಾಯವಾಯಿತೆಂದು ಎಚ್ಚೆತ್ತ ಗರುಡನು ಪ್ರಶ್ನಿಸಿದಾಗ ಜೀಮೂತವಾಹನನು ಪರೋಪಕಾರ, ಜೀವ ದಯಿಯ ಕುರಿತು ಹೇಳಿ ತನ್ನನ್ನು ಪೂರ್ಣವಾಗಿ ತಿನ್ನುವಂತೆ ನಗುತ್ತಾ ಹೇಳುತ್ತಾನೆ.

ಇಲ್ಲಿಯೂ ಸುಖಾಂತ್ಯವೇ ಒದಗುತ್ತದೆ. ತಪ್ಪು ಮಾಡಿದೆ ಎಂದು ಭಾವಿಸಿದ ಗರುಡನು ಮೇಲೆ ಹಾರಿ ಸ್ವರ್ಗದಿಂದ ಅಮೃತವನ್ನು ತರುತ್ತಾನೆ. ಆಗ ಜೀಮೂತವಾಹನನ ಜೊತೆಗೆ ಈ ಮುಂಚೆ ಬಲಿಯಾದವರೆಲ್ಲರೂ ಬದುಕುತ್ತಾರೆ. ಅಸುರೀಗುಣಗಳ ನಿವಾರಣೆಗೆ ಮಾನವೀಯ ಮೌಲ್ಯಗಳನ್ನು ಮುಖಾಮುಖಿಯಾಗಿಸಿ ಒಂದು ಯಶಸ್ವೀ ತಂತ್ರದ ಕಥನವನ್ನು ಸರತಿಸಾಲಿನ ಹಿನ್ನೆಲೆಯಲ್ಲಿ ಶ್ರೀಹರ್ಷನು ನಮ್ಮೆದುರು ಅನಾವರಣಗೊಳಿಸಿದ್ದಾನೆ. ಅಂಗುಲಿ ಮಾಲನನ್ನು ಪರಿವರ್ತಿಸಿದ ಬುದ್ಧನ ಪ್ರಸಂಗವು ಬಹುಶ: ಹರ್ಷನಿಗೆ ಪ್ರೇರಣೆಯನ್ನು ಒದಗಿಸಿರಬಹುದು. ಆ ಬೆಳಕಿನಲ್ಲಿ ನಡೆದು ಹರ್ಷನು ತ್ಯಾಗ, ಪರೋಪಕಾರ, ದಯೆ, ಅಹಿಂಸೆಗೆ ಹೊಸ ವ್ಯಾಖ್ಯಾನವನ್ನು ನೀಡಿ ವಿವೇಕದ ಹಾದಿಯಲ್ಲಿ ನಡೆದಿದ್ದಾನೆ. ಹೀಗೆ ಭಾರತೀಯ ಸಾಹಿತ್ಯವು ಸದಾ ಜೀವಪರವಾಗಿಯೇ ನಡೆದು ಬಂದಿದೆ. ಇದೇ ಈ ದೇಶದ ಅಂತ:ಸತ್ವವೂ ಆಗಿದೆ.

ಧರ್ಮದ ಮೇಲಾಟ ನಮ್ಮಲ್ಲಿ ಹೊಸದೇನೂ ಅಲ್ಲ ಆದರೆ ಅಂತಹ ಸಂದರ್ಭಗಳಲ್ಲಿ ಹಿಂಸೆ, ರಕ್ತಪಾತದ ಬದಲಾಗಿ ಉತ್ಕೃಷ್ಟವಾದ ಕಾವ್ಯಗಳು ಮೂಡಿ ಬಂದಿವೆ. ಕುಮಾರವ್ಯಾಸಭಾರತದ ನಂತರ ಪ್ರಭುಲಿಂಗಲೀಲೆಯೂ, ಜೈಮಿನಿಭಾರತದ ನಂತರ ಚೆನ್ನಬಸವ ಪುರಾಣವೂ ರಚನೆಯಾದದ್ದು ಇಂತಹ ಸಂದರ್ಭಗಳಲ್ಲಿಯೇ. ಇಂತಹ ಸ್ಪರ್ಧೆಗಳಿಂದ ಮೂಡಿಬಂದ ಕೃತಿಗಳೂ ಕವಿಗಳೂ ನಮ್ಮ ನಾಡಿನ ಘನತೆಯನ್ನು ಹೆಚ್ಚಿಸಿದ್ದಾರೆ. ಇಂತಹ ಪರಂಪರೆಯೇ ನಮ್ಮ ಹೆಮ್ಮೆ.






Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

REQUIRED

Are you passionate about creativity, branding and making ideas come alive?
We're looking for dynamic individuals to join our Advertising & Marketing Team!

POSITION
- Advertising Manager
- Ad Sales Executive

LOCATION
Vijayanagara Dist.

Who can Apply:
- MBA/BBA in Marketing, Mass Communication, related fields
- Experience in media ad sales or Marketing preferred
- Freshers with strong passion for advertising are welcome too!

Submit Your CV and Portofolio :
96866 63125

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ

ಡಿ.ವಿ.ಜಿ.

# ವಾರಾಂತ್ಯದ ವಿರಾಮ...

ಒಂದು ಕೆಲಸ ಮಾಡಬಹುದು ನಾವು ಈ ವೀಕ್ ಎಂಡ್ ಗೆ ಎಲ್ಲಿಯಾದರು ಪ್ಲಾನ್ ಮಾಡೋಣ. ಒಂದಷ್ಟು ಸಮಯ ಬೇಕಾಗಿದೆ ನನಗೆ, ಇನ್ಫ್ಯಾಕ್ಟ ಇಡೀ ಕುಟುಂಬಕ್ಕೆ. ಇಲ್ಲ ಅಂದರೆ ಸತ್ತೆ ಹೋಗುತ್ತೇನೆ ಅನಿಸ್ತಿದೆ, ನನಗೆ ತಲೆ ಕೆಟ್ಟು ರೋಸಿ ಹೋಗಿದೆ. ಅಲ್ವೆ ಮತ್ತೆ ವಾರ ಪೂರ್ತಿ ಇದೇ ಆಯ್ತು, ಹತ್ತರಿಂದ ಆರು ಘಂಟೆಯ ತನಕದ ಕೆಲಸಕ್ಕೆ, ಬೆಳಗ್ಗೆ ಎಂಟಕ್ಕೆ ಆರಂಭಿಸಿ ರಾತ್ರಿ ಒಂಬತ್ತಕ್ಕೆ ಮನೆ ಸೇರುವುದು. ಒಂದು ಕಡೆ ಲಾಜಿಕ್ಕೆ ಇಲ್ಲದ ಆ ಆಫೀಸ್ ಕೆಲಸ ಮಾಡಿ ತಲೆ ಹಾಳು. ಇವುಗಳ ಮಧ್ಯ ಈ ನಾಲ್ಕೈದು ಗಂಟೆಯ ಟ್ರಾಫಿಕ್‌ನಲ್ಲಿ ಸಿಕ್ಕಿಕೊಂಡು ಮನೆಗೆ ಬರುವುದಿದೆಯಲ್ಲ ಈ ಕರ್ಮ ಯಾರಿಗೂ ಬೇಡ.

ಮನೆಗೆ ಬಂದರೆ ಮುಗೀತು ಅನ್ನುವ ಹಾಗೆನಿಲ್ಲ, ಮಕ್ಕಳ ಪ್ರೊಜೆಕ್ಟ ಕೆಲಸ, ಅಮ್ಮನ ಕಾಲು ನೋವು, ಅಪ್ಪನ ಮೆಡಿಕಲ್ ಚೆಕ್ ಅಪ್ ಗೆ ಅಪಾಯಿಟ್‌ಮೆಂಟ್ ತಗೋಬೇಕು, ಈ ಶನಿವಾರ ಭಾನುವಾರ ಅಪಾಯಿಟ್‌ಮೆಂಟ್ ಸಿಗೋದೇ ಕಷ್ಟ. ಒಂದು ವಾರ ಅಲ್ಲ ಒಂದು ತಿಂಗಳು ಮೊದಲು ಅಡ್ವಾನ್ಸ್ ಬುಕಿಂಗ್ ಮಾಡ್ಲೆ ಬೇಕು. ಬರುವ ಒಂದು ಭಾನುವಾರಕ್ಕೆ ಅದೆಷ್ಟೆಲ್ಲ ಜವಾಬ್ದಾರಿಗಳನ್ನು ಲೋಡ್ ಮಾಡಿಕೊಳ್ಳುತ್ತೇವೆ.

ಗೊತ್ತ ನಿಮಗೆ ಅದೆಷ್ಟು ದಿನಗಳು ವಾರಗಳು ತಿಂಗಳುಗಳೇ ಕಳೆದಿರಬೇಕು ಗಂಡ ಹೆಂಡತಿ ಸರಿಯಾಗಿ ಮಾತನಾಡಿಕೊಡಿದ್ದು. ಬೇಕು ಬೇಡಗಳನ್ನು ಹೇಳಿಕೊಂಡಿದ್ದು. ಇನ್ನು ಮಕ್ಕಳು... ದೇವರೆ ಬಲ್ಲ ಅವರನ್ನು ಸ್ವಿಮ್ಮಿಂಗೊ, ಕರಾಟೆಗೊ ಆರ್ಟ್ ಕ್ಲಾಸ್ ಗೊ ಹಾಕಿ ಅವರನ್ನು ಕರೆದುಕೊಂಡು ಬರುವುದಕ್ಕೆ ಒಂದು ಆಟೋ, ಒಬ್ಬ ಆಯಾಳನ್ನು ಫಿಕ್ಸ್ ಮಾಡಿದ್ದೇ ದೊಡ್ಡ ಸಾಧನೆ ಎನ್ನುವಂತಾಗಿದೆ. ಇತ್ತೀಚಿಗೆ ಮಕ್ಕಳು ಪೋಷಕರಿಗಿತ ಈ ಮನೆ ಕೆಲಸದವರನ್ನೆ ಹೆಚ್ಚು ಹಚ್ಚಿಕೊಂಡು ಬಿಟ್ಟಿವೆ ಅನಿಸುತ್ತಿದೆ. ಹಣ ಒಂದು ಇದ್ದರೆ ಎಲ್ಲಾ ಎಲ್ಲಾ ಸರಿಹೋಗುತ್ತೆ ಅಂದುಕೊಂಡಿದ್ದೇವೆ ಅಲ್ವೆ? ಮತ್ತೆ ಅದನ್ನೆ ಪಡೆದುಕೊಳ್ಳಲು ಓಡುತ್ತಿದ್ದೇವೆ ಅನಿಸ್ತಿದೆ.

ಸರಿ ಬಿಡು ಪಾಲಿಗೆ ಬಂದಿದ್ದು ಅಂದುಕೊಂಡು ಇಷ್ಟೆಲ್ಲಾ ದುಡಿದರೂ ತಿಂಗಳ ಕೊನೆಗೆ ಸಿಗುವ ಸಂಬಳ ಒಂದಕ್ಕೆ ಸಾಕಾದರೆ ಮತ್ತೊಂದಕ್ಕೆ ಸಾಲಲ್ಲ, ವರ್ಷದಿಂದ ವರ್ಷಕ್ಕೆ ಖರ್ಚು ಹೆಚ್ಚಾಗ್ತಾನೆ ಇದೆ ಹೊರತು, ಸಂಬಳ ಮಾತ್ರ ಅಷ್ಟರಲ್ಲೇ, ಒಂದು ವೇಳೆ ಆಫೀಸ್ ನಲ್ಲಿ ಕೇಳಿದರೆ ಶಾಶ್ವತವಾಗಿ ಮನೆಗೇ ದಾರಿ ತೋರಿಸ್ತಾರೆ.

ಒಮ್ಮೆ ಹಾಗೆ ಯೋಚಿಸಿ ನೋಡಿ ದುರಾದೃಷ್ಟವಶಾತ್ ನಾವು ವಯಸ್ಸಿನಲ್ಲಿ ದೊಡ್ಡವರಾಗುತ್ತಿದ್ದಂತೆ ನಮ್ಮೊಳಗಿನ ಮಗು ಮನಸ್ಥಿತಿ ಅದೆಲ್ಲೋ ಮರೆಯಾಗಿ ಬಿಟ್ಟಿತು. ಹೌದು ಸಹಜವೇ ಅನ್ನಿಸಿದರೂ ಆ ಮನಸ್ಥಿತಿಯನ್ನು ನಾವೇಕೆ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಾವು ಬದುಕಿರುವುದೇ ದುಡಿಯುವುದಕ್ಕೆ ಎಂಬಂತಹ ಮನಸ್ಥಿತಿ ನಮಗರಿವಿಲ್ಲದಂತೆ ನಮ್ಮಲ್ಲಿ ಬೇರೂರಿದ್ದು ಯಾವಾಗ? ನಮ್ಮ ಸುತ್ತಲಿನ ವಾತವರಣವೂ ನಮ್ಮದೇ ಆಗಿತ್ತಲ್ಲವೆ? ನಾನು ನನ್ನವರು ನಮ್ಮೊಂದಿಗೆ ನಾವೆಲ್ಲಾ ಹಾಯಾಗಿದ್ದೆವಲ್ಲ, ಅದಕ್ಕೆ ನಮ್ಮ ಬಾಲ್ಯವೇ ಒಂದು ಉದಾಹರಣೆ. ಆದರೆ ಇಂತಹ ನಮ್ಮ ಮಗುವಿನ ಮನಸ್ಥಿತಿಯನ್ನು ಹಾಳು ಮಾಡಿ, ತಮ್ಮದೇ ಆದ ಹೊಸ ಹೊಸ ಥಿಯರಿಗಳನ್ನು ಹೆಣೆಯುವುದರಲ್ಲಿ ಜಾಗತಿಕ ಮಾರುಕಟ್ಟೆಯ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಯಶಸ್ವಿಯಾಗಿವೆ. ಹಾಗಾಗಿ ನಮ್ಮ ಹವ್ಯಾಸಗಳು ನಮಗೇ ಸರಿಕಾಣದಂತೆ ಮಾಡಿ, ಇವೆಲ್ಲ ಶುದ್ಧ ಸಮಯ ಹಾಳು ಮಾಡುವಂತಹ ಯೋಚನಾಕ್ರಮಗಳು ಎನ್ನುವ ಅಭಿಪ್ರಾಯ ವನ್ನುಂಟು ಮಾಡಿ, ನಾವು ಬದಿಕಿರುವುದೇ ದುಡಿಯಲಿಕ್ಕೆ ಎನ್ನುವಂತಾಗಿದೆ. ಇಂದಿನ ಹಳ್ಳಿಯಾದಿಯಾಗಿ ನಗರಗಳಲ್ಲಿ ಬದುಕುವ ನಮಗೆ ಆಟಗಳು, ಹವ್ಯಾಸಗಳ ಆರೋಗ್ಯಯುತ ಚಟುವಟಿಕೆಗಳ ಬಗ್ಗೆ ಆಲಸ್ಯ ಒಂದರ್ಥದಲ್ಲಿ ಅವುಗಳ ಬಗ್ಗೆ ತಿರಸ್ಕಾರ ಕೇಳಿದರೆ ಪುರುಸೊತ್ತಿಲ್ಲ ಎಂದು ಆರಾಮಾಗಿ ಜಾರಿಕೊಳ್ಳುವಂತಹ ಮನಸ್ಥಿತಿಗೆ ತಂದುಬಿಟ್ಟಿವೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ನಮ್ಮಲ್ಲಿ ಕೆಲ ಸರ್ವೇ ಸಾಮಾನ್ಯ ಒಪ್ಪಿಕೊಳ್ಳಲೇ ಬೇಕು ಅಂತಲೆ ಮಾಡಿರುವ ತರ್ಕ ರಹಿತ ವಾದಗಳಿವೆ. ಒಂದು ವೇಳೆ ಅವುಗಳನ್ನು ಪ್ರಶ್ನೆ ಮಾಡಿದರೆ ನಿಮಗೆ ತಲೆಹರಟೆ, ಬುದ್ದಿ ಬೆಳೆದಿಲ್ಲ, ಅಪಕ್ವ, ತಲೆಯ ಮೇಲಿನ ಮಾಂಸ ಆರಿಲ್ಲ ನಿನಗೆ. ದೊಡ್ಡವರ ಜೊತೆ ಹೇಗೆ ಮಾತನಾಡಬೇಕು ಎನ್ನುವುದನ್ನು ಕಲಿಯಬೇಕು ಎನ್ನುವಂತಹ ಪುಕ್ಕಟೆ ಸಲಹೆಗಳನ್ನು ಪಡೆಯಬೇಕಾಗುತ್ತದೆ. ಒಪ್ಪಿಕೊಳ್ಳುತ್ತೇನೆ.

ನಾವು ಬೆಳದಂತೆ ನಮ್ಮ ಕರ್ತವ್ಯಗಳು, ಜವಾಬ್ದಾರಿಗಳು, ಜೀವನ ಕ್ರಮಗಳು, ಬದಲಾಗುತ್ತವೆ ಆದರೆ ನಮ್ಮಲ್ಲಿನ ಮುಗ್ದತೆ ಯಾಕೆ ಮಾಯ ವಾಗಬೇಕು? ನಮ್ಮಲ್ಲಿನ ಕುತೂಹಲ, ಇರುವುದನ್ನು ಒಪ್ಪಿಕೊಳ್ಳುವ, ಇರುವು ದರಲ್ಲೇ ಖುಷಿಯಾಗಿರುವ, ಇತರರಗೆ ಹಂಚಿ ತಿನ್ನುವ, ಇತರರೊಂದಿಗೆ ಮುಕ್ತವಾಗಿ ಬೆರೆಯುವ ಸುಳ್ಳನ್ನು ಹೇಳದಿರುವ, ಒತ್ತಡ ರಹಿತವಾದ ಮಾನಸಿ ಕತೆಯ ಆ ಮಗು ಮನಸ್ಸುನ್ನು



ಏಕೆ ಕಳೆದುಕೊಳ್ಳಬೇಕು? ಕೊನೆ ಪಕ್ಷ ಮುಗ್ದ ನಗುವಾದರೂ ಇರಬೇಕಲ್ಲವೆ? ಸರಿಯಾಗಿ ಮನೆಯ ಮಂದಿಯ ಜೊತೆಗೆ ಒಂದು ತಾಸು ಕುಳಿತುಕೊಳ್ಳಲೂ ಅನುವು ಮಾಡಿಕೊಡದ ಆ ನಿನ್ನ ಬೆಳವಣಿಗೆ, ದೊಡ್ಡತನ, ದೊಡ್ಡಹುದ್ದೆ ಯಾರಿಗಾಗಿ..?

ಒಮ್ಮೆ ಯೋಚಿಸಿ.....

1. ನೀನು ಬೇಗ ಬೇಗ ತಿಂದುಂಡು ಬೆಳದಂತೆ ನಿನ್ನ ಬಾಲ್ಯವನ್ನು ಕಳೆದುಕೊಂಡೆ.
2. ನೀನು ಪಡೆದ ಅಂಕಗಳ ಪಟ್ಟಿಯಲ್ಲಿನ ನಿನ್ನ ರ್‍ಯಾಂಕು ನಿನ್ನ ನಿಜ ವಿದ್ಯಾರ್ಥಿ ಜೀವನದ ಎಷ್ಟು ಖುಶಿಗಳನ್ನು ಕಿತ್ತುಕೊಂಡಿದೆ ಎನ್ನುವುದು ನಿನಗೇ ಗೊತ್ತು.
3. ನಿನ್ನ ಉದ್ಯೋಗಕ್ಕಾಗಿ ನಿನ್ನ ಏನೆಲ್ಲವನ್ನು ಬಲಿಹಾಕಿ ತರ್ಪಣ ಬಿಟ್ಟಾಗಿದೆ ಎನ್ನುವುದನ್ನು ನೀನೆ ಗಮನಿಸಿದ್ದೀಯಾ.
4. ನಿನ್ನ ಅಂತಸ್ತು, ನಿನ್ನ ಎಷ್ಟು ಸ್ನೇಹಿತರನ್ನು, ಬಂಧುಬಾಂದವರನ್ನು ನಿನ್ನಿಂದ ದೂರ ಮಾಡಿದೆ ನೀನೆ ಹೇಳಬೇಕು.
5. ನಿನ್ನ ಅಧಿಕಾರ, ನಿನ್ನ ಎಷ್ಟು ಜನರಿಗೆ ಉಪಯೋಗವಾಗಿದೆ– ಎಷ್ಟು ಜನರ ಕಷ್ಟಕ್ಕೆ ದಾರಿಮಾಡಿಕೊಟ್ಟಿದೆ.

ಅಂದರೆ ಈ ಜೀವನವೆಂದರೆ ಪಡೆದುಕೊಂಡಿದ್ದಕ್ಕಿಂತ ಕಳೆದು ಕೊಂಡಿದ್ದೇ ಹೆಚ್ಚು ಅನಿಸಿರಬೇಕಲ್ಲವೆ..? ಇದು ಅನಿವಾರ್ಯವೇ..? ಹೌದು ಎನ್ನುವವರನ್ನು ಯಾರೂ ತಿದ್ದಲಿಕ್ಕೆ ಸಾಧ್ಯವಿಲ್ಲ..! ಇನ್ನೂ ಹಾಗೆನಿಲ್ಲ ಸ್ವಲ್ಪ ಪ್ರಯತ್ನ ಪಟ್ಟರೆ ಕಳೆದುಕೊಳ್ಳುವುದರಲ್ಲಿನ ಅಂಶಗಳಲ್ಲಿನ ಸಹಜತೆಯನ್ನು, ಅನಿವಾರ್ಯತೆಯನ್ನು ಒಪ್ಪಿಕೊಂಡು. ಅದರಲ್ಲಿನ ಸಾರ್ಥಕತೆಯನ್ನು, ಆನಂದವನ್ನು ಅನುಭವಿಸುವ ರೀತಿಯನ್ನು ಹಾಗು ಪ್ರತೀ ಹಂತದಲ್ಲಿಯೂ ಪಡೆದುಕೊಂಡಿದ್ದನ್ನು ಕಳೆದು ಕೊಳ್ಳುವ ಮೊದಲು ಸಾರ್ಥಕತೆಯ ಸಾಪಲ್ಯತೆಗೆ ಬಳಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ ಅಂದುಕೊಂಡವರೆಗೆ.

ಒಮ್ಮೆ ಅಂದುಕೊಂಡರೆ, ಹಾಗೆ ನೋಡಿದರೆ ಈ ಜೀವನ ಒಂದರೆಕ್ಷಣದ ಕಲ್ಪನೆ ಕನಸೇನೋ ಅನ್ನಿಸಿಬಿಡುತ್ತದೆ. ಯಾವುದೊ ಒಂದನ್ನು ಕಳೆದಕೊಂಡ ಮೇಲೆ ಅದರ ಬೆಲೆ ಗೊತ್ತಾಗುತ್ತೆ ಎನ್ನುತ್ತಾರಲ್ಲ ಹಾಗೆ, ಏಕೆಂದರೆ ಈಗ ನಮಗೆ ಸೊಗಸೆಂಬಂತೆ, ಬಹಳ ಸುಂದರ ಎನ್ನುವಂತೆ ಕಾಣುವ ಅಂದಿನ ನಮ್ಮ ಬಾಲ್ಯವು ನಮ್ಮ ಆ ಕಾಲದಲ್ಲಿ ನಮಗೆ ಅಷ್ಟೇನೂ ಸೊಗಸಾಗಿ ಕಂಡಿರಲಿಲ್ಲ ಅಲ್ವೆ? ಇದಕ್ಕೆ ವ್ಯತಿರಿಕ್ತವಾಗಿ ನಾವು ಬೇಗನೆ ದೊಡ್ಡವರಾಗಬೇಕು, ನನ್ನ ಬೇಕು ಬಯಕೆಗಳನ್ನು ನಾನೆ ನಿರ್ಧರಿಸಬೇಕು ಎನ್ನುವ ವಿಚಾರದಾರೆಗಳು ಬಂದಿರಲೂ ಬಹುದಲ್ಲವೆ..? ಈಗ ಹೇಳಿ ನಮ್ಮ ಜೀವನವನ್ನು ಈ ದೃಷ್ಟಿಕೋನದಲ್ಲಿ ನಾವು ನೋಡುವುದಾದರೆ, ನಮಗೀಗ ನಮ್ಮ ಅಂದಿನ ಆ ಹಂಬಲ ಈಗ ನಮ್ಮ ಕಣ್ಣಮುಂದೇ ಇದೆ ಎಂದಾಯಿತು. ನಾವಿಂದು ನಮ್ಮ ಆ ಕನಸನ್ನು ಖುದ್ದಾಗಿ ನಾವೇ ಜೀವಿಸುತ್ತಿದ್ದೇವೆ ಎಂದಾಯಿತಲ್ಲವೆ? ಆದರೂ ಆ ಕಳೆದು ಹೋದ ದಿನಗಳನ್ನು ಮತ್ತೆ ನೆನೆಯುತ್ತೇವೆ, ಮತ್ತೊಮ್ಮೆ ಅಂತಹ ದಿನಗಳು ಬೇಕು ಎಂದುಕೊಳ್ಳುತ್ತೇವೆ, ಆ ಸಮಯದಲ್ಲಿನ ಪ್ರತಿ ಕ್ಷಣವನ್ನು ನೆನದು ಇನ್ನಿಲ್ಲದಂತೆ ಅದಕ್ಕಾಗಿ ಹಂಬಲಿಸುತ್ತೇವೆ. ಇದೇ ಅಲ್ವೆ ಈ ಬದುಕಿನ ವಿಪರ್ಯಾಸ ಬಹುಷಃ ನಮ್ಮ ಬದುಕಿನ ಹಲವು ದ್ವಂದ್ವಗಳಲ್ಲಿ ಬಹುದೊಡ್ಡ ದ್ವಂದ್ವ ಇದೆ ಅಲ್ವೆ.

ಹಾಗಾಗಿ ಈ ದ್ವಂದಗಳ ಮಧ್ಯೆಯ ಜೀವನ ಮುಗಿದು ಹೋಗಬಾರದಲ್ಲವೆ? ನಮ್ಮ ಜೀವನದ ಒಳ್ಳೆಯ ಹವ್ಯಾಸಗಳನ್ನು ಮುಂದುವರಿಸಬೇಕು. ಅಯ್ಯೊ ಈಗಲ್ಲ ಅದು ಸಾಧ್ಯವಿಲ್ಲ ಬಿಡು ಎನ್ನುವುದಕ್ಕಿಂತ, ಈಗಲೂ ಅವುಗಳ ಜೊತೆಗೆ ನಾವು ಬೆಳೆಯುವ ಪ್ರಯತ್ನ ಮಾಡಬೇಕು. ನಮ್ಮೊಳಗಿನ ಆ ಲವಲವಿಕೆಯನ್ನು, ಆ ಮುಗ್ದ ಮಗುವನ್ನು ಜೀವಂತವಾಗಿರಿಸಲು ಪ್ರಯತ್ನಿಸಬೇಕು. ಏನನ್ನೂ ಓದಿ ಏನಲ್ಲಾ ಮಾಡುವುದಕ್ಕಿಂತ ಮನೆಯ ಮಕ್ಕಳ, ಮನೆಯವರ, ಮನದೆನ್ನಿಯ/ದೆನ್ನನ ಮನಸ್ಸನ್ನು ಓದುಲು ಪ್ರಯತ್ನಿಸು. ಜಿಮ್ಮಿನಲ್ಲಿ ಜಿಗಿದಾಡುವುದಕ್ಕಿಂತ ಒಂದರ್ಧ ಗಂಟೆ ನಿಮ್ಮವರೊಂದಿಗೆ ನಾಲ್ಕು ಒಳ್ಳೆ ಮಾತಾಡ್ತ ಹೆಜ್ಜೆ ಹಾಕಿ. ತನ್ನ ಮೆಚ್ಚಿನ ಗೆಳೆಯ/ಗೆಳತಿಗೆ ಒಂದು ನಿಮ್ಮ ಕೈಬರಹದ ಪತ್ರ ಬರೆಯಿರಿ, ನಿಮ್ಮವರಿಗಾಗಿ ಒಂದಿಷ್ಟು ಆಪ್ತ ಸಮಯವನ್ನು ಕೊಡಿ, ಇತರರನ್ನು ಮಾತನಾಡಲು ಬಿಡಿ, ಒಂದಿಡಿ ದಿನ ಮೌನವಾಗಿರಿ ಆಗದಿದ್ದರೆ ಒಂದೆರಡು ತಾಸು ಪ್ರಯತ್ನಿಸಿ.

ಹೀಗೆ ಹವ್ಯಾಸಗಳ ನೆಪದಲ್ಲಿ ಒಂದಿಷ್ಟು ಜೀವನಪ್ರೀತಿ ಹೆಚ್ಚಾದರೆ ಅದರಲ್ಲಿ ತಪ್ಪೇನಿಲ್ಲ. ಬಂದಂತೆ ಬರಲಿ, ಅನುಭವಿಸಿ ಬಿಡಿ. ಇರುವುದೊಂದೆ ಜನ್ಮ. ಎಲ್ಲದನ್ನೂ ಪ್ಲಾನ್ ಮಾಡಿಯೇ ಮಾಡುವುದನ್ನು ಬಿಡು, ಇದ್ದಕ್ಕಿದ್ದಂತೆ ಎದ್ದು ಹೊರಟು ಬಿಡಿ, ಸುಮ್ಮನೆ ಎದ್ದು ಹೊರಟುಬಿಡಿ ಯಾವುದಾದರೊಂದು ಪ್ರವಾಸಕ್ಕೊ, ದೂರದೂರಿಗೋ ಬಂದು ಮಿತ್ರರ ಮನೆಗೊ ಎಲ್ಲಿಗೋ.. ಏಕೆಂದರೆ ಜೀವನದ ಅಂತಿಮಯಾತ್ರೆಯ ಪಯಣವು ಹಾಗೆ ಇದ್ದಕ್ಕಿದ್ದ ಹಾಗೆ ಎದ್ದು ಹೊರಟಾಗಿರುತ್ತದೆ ನೀವು ಅಂದುಕೊಳ್ಳುವ ಮೊದಲೇ..... ವಾರಂತಕ್ಕೆ, ಪೂರ್ಣ ವಿರಾಮವಿಟ್ಟು..!

## ಮೈಕ್ರೋ ನ್ಯೂಸ್

### ಮೇ.12 ರಂದು ಕೊಪ್ಪಳದಲ್ಲಿ ಶ್ರೀ ಭಗವಾನ್ ಬುದ್ಧರ ಜಯಂತಿ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಭಗವಾನ್ ಬುದ್ಧರ ಜಯಂತಿ ಕಾರ್ಯಕ್ರಮವನ್ನು ಮೇ.12 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು.

### ಮೇ 15 ರಿಂದ ದ್ವಿತೀಯ ಅಧಿವೇಶನ ಇಲಾಖಾ ಪರೀಕ್ಷೆ: ನಿಷೇದಾಜ್ಞೆ ಜಾರಿ

**ಹಂಪಿ ಟೈಮ್ಸ್ ಕೊಪ್ಪಳ**

ಡಿ.ಇಎಲ್.ಇಡಿ ಪರೀಕ್ಷೆಗಳು ಮೇ 15 ರಿಂದ 27ರ ವರೆಗೆ ಕೊಪ್ಪಳದಲ್ಲಿ ನಡೆಯಲಿದ್ದು, ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ದ್ವಿತೀಯ ಅಧಿವೇಶನ ಇಲಾಖಾ ಪರೀಕ್ಷೆಗಳು ಮೇ 15 ರಿಂದ 27ರ ವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊಪ್ಪಳ ನಗರದ ಜವಾಹರ ರಸ್ತೆಯಲ್ಲಿರುವ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ (ಪ್ರೌಢ ವಿಭಾಗ ಆವರಣ) ಜರುಗಲಿದ್ದು, ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ತಡೆಗಟ್ಟಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ರ ಅನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ವಿವಿಧ ಷರತ್ತಿಗೆ ಒಳಪಟ್ಟು ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ನಿಷೇಧಿತ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ., ಮೊಬೈಲ್ ಪೇಜರ್, ಝರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷೆಯಲ್ಲಿ ಪ್ರವೇಶ ಪತ್ರ ಹೊಂದಿದ ಅಭ್ಯರ್ಥಿಗಳು ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನೂಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವದಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

# ಗಣಿಬಾಧಿತ ವಲಯ ಪ್ರದೇಶಗಳ ಮಣ್ಣು, ನೀರಿನ ಸಂರಕ್ಷಣೆ ಅಗತ್ಯ

ಮೊದಲ ಪುಟದಿಂದ

ವಾಗಿರುವ ಮೇಲ್ಮಣ್ಣನ್ನು ಪುನರ್ ಸ್ಥಾಪಿಸಿ ಮಣ್ಣು ಮತ್ತು ನೀರಿನ ಸಂರಕ್ಷಣೆ ಮೂಲಕ



ಮಣ್ಣಿನ ಫಲವತ್ತತೆಯನ್ನು ಪುನರುಜ್ಜೀ ವನಗೊಳಿಸಿ ವ್ಯವಸಾಯಕ್ಕೆ ಯೋಗ್ಯವನ್ನಾ ಗಿಸುವ ಮೂಲಕ ರೈತರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸುಸ್ಥಿರತೆಯನ್ನು ಪಡೆಯಲು ಈ ಯೋಜನೆ ಅನುಷ್ಠಾನ ವಾಗುತ್ತಿದೆ ಎಂದು ತಿಳಿಸಿದರು.

ಗ್ರಾಮ್ಸ್ ಸಂಸ್ಥೆಯ ಸಿಇಓ ಮಹೇಶ್ ಕುಮಾರ್ ಅವರು ಮಾತನಾಡಿ, ಯೋಜನಾ ವ್ಯಾಪ್ತಿಯ ಗ್ರಾಮಗಳ ರೈತರಿಗೆ ತಮ್ಮ ತಮ್ಮ ಜಮೀನುಗಳಲ್ಲಿ ಯಾವ ರೀತಿಯಾಗಿ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡಿಕೊಳ್ಳಬೇಕು, ಸಂರಕ್ಷಣೆಯನ್ನು ಮಾಡಲು ಯಾವ ರೀತಿಯಾಗಿ ಉಪಚಾರಗಳನ್ನು ಮಾಡಬೇಕು ಎಂದು ತಿಳಿಸಿಕೊಡಲಾಗುವುದು ಎಂದರು.

ಈ ಯೋಜನೆಯಡಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ತಮ್ಮ ಜಮೀನುಗಳಿಗೆ ಖುದ್ದಾಗಿ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿ ಅಗತ್ಯವಿರುವ ಮತ್ತು ಜಮೀನಿಗೆ ಸೂಕ್ತವೆನಿಸುವ ಮಣ್ಣು ಮತ್ತು ನೀರಿನ ಸಂರಕ್ಷಣೆ ಉಪಚಾರ, ತೋಟಗಾರಿಕೆ, ಅರಣ್ಯೀಕರಣ, ಜೀವನೋಪಾಯ ಚಟುವಟಿಕೆಗಳ ಮಾಹಿತಿ ನೀಡುವರು ಎಂದರು.

ರೈತರಿಗೆ ತಿಳಿಸಿದಂತಹ ಉಪಚಾರಗಳನ್ನು ಯೋಜನಾ ವಿಸ್ತೃತ ವರದಿಯಲ್ಲಿ ನಿಯಮಾನಸಾರ ನಮೂದಿಸಿ, ಜಿಲ್ಲಾ ಮಟ್ಟದ ಸಭೆಯಲ್ಲಿ ಅನುಮೋದನೆ ಪಡೆದು ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲಾಗುತ್ತದೆ. ಈ ಯೋಜನೆಯನ್ನು ಉಚ್ಚ ನ್ಯಾಯಾಲಯ ನಿರ್ದೇಶನದ ಮೇರೆಗೆ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ನಿರ್ದೇಶನ ಮತ್ತು ಮಾರ್ಗದರ್ಶನದಲ್ಲಿ ಅನುಷ್ಠಾನವಾಗುತ್ತದೆ ಎಂದು ನಕ್ಷೆಯ ಮೂಲಕ ಗ್ರಾಮಸ್ಥರಿಗೆ ಮನ ಮುಟ್ಟುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ತೇರಿ ಸಂಸ್ಥೆಯ ವಿಜಯ ಮೇಟಿ, ಕ್ಷೇತ್ರದ ಜಿಲ್ಲಾ ತಂಡದ ನಾಯಕರಾದ ಅಶ್ವಿನಿ, ಗ್ರಾಮ ಪಂಚಾಯಿತಿ ಸದಸ್ಯರಾದ ನಿರ್ಮಲ ಬಾಯಿ, ರಮೇಶ್ ನಾಯಕ್, ರವಿನಾಯಕ್, ಕೃಷಿ ಅಧಿಕಾರಿಗಳಾದ ಲೋಕರಾಜ್, ಬಸವರಾಜ್ ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.


ಜಾನೆಕುಂಟೆ–ವೇಣಿ ವೀರಾಪುರ ಯೋಜನೆಯ ತಂಡದ ನಾಯಕರಾದ ವೀಣಾ ಅವರು ಕಾರ್ಯಕ್ರಮ ನಿರೂಪಿಸಿದರು. ಹಲಕುಂದಿ ಬೆಳಗಲ್ಲು ಯೋಜನೆಯ ತಂಡದ ನಾಯಕರಾದ ಅಶ್ವಿನಿ ಸ್ವಾಗತಿಸಿ, ವಂದಿಸಿದರು.



ಕೊಟ್ಟೂರಿನ ವಿ.ಪಿ.ಈಶ್ವರನಾಯ್ಕ ಐಟಿಐ ಕಾಲೇಜಿನಲ್ಲಿ ಶನಿವಾರ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು. ಉಪನ್ಯಾಸಕಿ ಜಯ ವಾಗೀಶ್ ಇವರನ್ನು ಗೌರವಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಟಿ.ಎಂ.ಸಣ್ಣಕೊಟ್ರಯ್ಯ, ಬಿಡಿಸಿಸಿ ಬ್ಯಾಂಕ್ ಕ್ಷೇತ್ರಾಭಿವೃದ್ಧಿ ಅಧಿಕಾರಿ ಅಂಬಳಿ ಕೊಟ್ರೇಶ್, ಎಂ.ಎಂ. ಜೆ.ವಾಗೀಶ್, ಬಿ.ಶಿವಕುಮಾರ್, ಲತಾ ಶಿವಕುಮಾರ್ ಇತರರಿದ್ದರು.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

CHARIOT TOUR & TRAVELS
HOSAPETE, VIJAYANAGARA DIST.
Let's take a perfect dream destination with us!
BOOK NOW
JAGANATHA GOUDA M: 7483551730
SAGAR M: 7975748092
chariottoursandtravels48@gmail.com



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 10–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.73 ಅಡಿ |
| ಒಳ ಹರಿವು | 1807 ಕ್ಯುಸೆಕ್ |
| ಹೊರ ಹರಿವು | 292 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.814 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.67 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7 ಕ್ಯುಸೆಕ್ |
| ಸಾಮರ್ಥ್ಯ | 3.443 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

11–05–2025 – ಭಾನುವಾರ

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಸ್ವಾತಿ |
| ಯೋಗ | : ವ್ಯತಾಪತಾ |
| ಕರಣ | : ಗರಜ |
| ಸೂರ್ಯೋದಯ | : 05:48:58 |
| ಸೂರ್ಯಾಸ್ತ | : 18:57:56 |
| ರಾಹು ಕಾಲ | : 17:19–18:58 |
| ಯಮಘಂಡ ಕಾಲ | : 12:23–14:02 |
| ಗುಳಿಕ ಕಾಲ | : 15:41–17:19 |

# ಸ್ತ್ರೀ ಸಮಾಜಕ್ಕೆ ಆದರ್ಶ ಹೇಮರೆಡ್ಡಿ ಮಲ್ಲಮ್ಮ

## ಸಹಾಯಕ ಪ್ರಾಧ್ಯಾಪಕ ಡಾ.ಜಿ.ವಿ.ರಾಜಣ್ಣ ಹೇಳಿಕೆ । ಮನೆಗೆದ್ದು, ಜಗಗೆಲ್ಲು ತತ್ವ ಪಾಲನೆ



**ಹಂಪಿ ಟೈಮ್ಸ್ ಚಿತ್ರದುರ್ಗ**
ಸಂಸಾರದಲ್ಲಿಯೇ ಇದ್ದು ಸಾಧಕಿಯಾಗಿ, ಸ್ತ್ರೀ ಸಮಾಜಕ್ಕೆ ಆದರ್ಶ ಸ್ತ್ರೀ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಎಂದು ಚಳ್ಳಕೆರೆ ಬಾಪೂಜಿ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ.ಜಿ.ವಿ.ರಾಜಣ್ಣ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಸಮಾರಂಭದಲ್ಲಿ ಉಪನ್ಯಾಸ ನೀಡಿದರು.

ಕಾಯಕದ ಮೂಲಕ, ಸಂಸಾರದ ನೊಗಕ್ಕೆ ಹೆಗಲು ಕೊಡುವ ಮೂಲಕ ಭಕ್ತಿಯ ಸಾಧನೆ ಮಾಡಿ, ಭಕ್ತಿ ಮಾರ್ಗದ ಮೂಲಕ ಅನುಭಾವಿಯಾದವಳು ಮಲ್ಲಮ್ಮ. ತಾನು ಬದುಕಿನಲ್ಲಿ ಕಂಡುಂಡ ಅನುಭವಗಳನ್ನು ಇತರರಿಗೆ ಹಂಚುವ ದಾರಿ ತೋರುವ ಅನುಭಾವಿ ಮಲ್ಲಮ್ಮ. ಗೃಹಧರ್ಮ ಪಾಲಿಸುತ್ತಾ ನೋವುಂಡ ಸ್ಥಳದಲ್ಲೇ ನೋವಿಗೆ ಮದ್ದು ಮಾಡುತ್ತಾ ತನ್ನವರನ್ನು ಅವರ ಅಜ್ಞಾನದಿಂದ ಅರಿವಿನ ಕಡೆಗೆ ಕರೆತಂದು ಕಾಯಕದ ಮೂಲಕವೇ ಮಲ್ಲಿಕಾರ್ಜುನನ್ನು ಕಾಣಲು ಸಾಧ್ಯವಾಗಿಸಿದವಳು ಮಲ್ಲಮ್ಮ. ಮನೆಗೆದ್ದು–ಜಗಗೆಲ್ಲು ಎನ್ನುವ ತತ್ವ ಅವಳದ್ದು ಎಂದು ಹೇಳಿದರು.

ನಾಡಿನ ಚರಿತ್ರೆಯೊಳಗೆ ನೂರಾರು ರಾಣಿ–ಮಹಾರಾಣಿಯರು ಸಿಗಬಹುದು. ಹಾಗೆಯೇ ಸಾಂಸ್ಕೃತಿಕ–ಆಧ್ಯಾತ್ಮಿಕ ಸಾಧನೆಯ ಉತ್ತುಂಗಕ್ಕೇರಿದ ಅನುಭಾವಿ ಮಹಿಳೆಯರು ದೊರಕಬಹುದು ಆದರೆ ಇವರೆಲ್ಲರಿಗಿಂತ ಭಿನ್ನವಾಗಿ ಕುಟುಂಬದ ಗೃಹಿಣಿಯಾಗಿ ತನ್ನ ಮನೆಯೊಳಗೆ ನೂರಾರು ಕಷ್ಟ–ನೋವುಗಳ ನಡುವೇ ಬದುಕಿ ಅದನ್ನೇ ಸಾಧನೆಯ ಹಾದಿಯಾಗಿಸಿಕೊಂಡು ಬದುಕಿ ತೋರಿಸಿಕೊಟ್ಟ ಮಹಾಶರಣೆ ಹೇಮರೆಡ್ಡಿ ಮಲ್ಲಮ್ಮ ಎಂದು ತಿಳಿಸಿದ ಅವರು, ಮಹಿಳೆಯನ್ನು ಗುರುವಾಗಿಸಿಕೊಂಡ ಆ ಹೆಸರಿನ ಮೂಲಕ ಗುರುತಿಸುವ ಏಕೈಕ ಸಮುದಾಯ ಹೇಮರೆಡ್ಡಿ ಮಲ್ಲಮ್ಮ ಸಮುದಾಯ ಎಂದು ಹೇಳಿದರು.

ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನಿ ಖುರೇಷಿ ಮಾತನಾಡಿ, ಹೇಮರೆಡ್ಡಿ ಇಡೀ ಸ್ತ್ರೀ ಕುಲಕ್ಕೆ ಮಾದರಿಯಾಗಿರುವಂತೆ ವ್ಯಕ್ತಿತ್ವ ರೂಪಿಸಿಕೊಂಡು, ಕೌಟುಂಬಿಕ ಸಂಕಷ್ಟಗಳನ್ನು ಮೆಟ್ಟಿನಿಂತು, ಸಾಮಾಜಿಕ ಚಿಂತನೆಯಲ್ಲಿ ಬದುಕಿನ ಆದರ್ಶ ಮೌಲ್ಯ ರೂಢಿಸಿಕೊಂಡು ಧಾರ್ಮಿಕ ಸಾಧನೆಗೈದ ಮಹಾಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ಎಂದು ಹೇಳಿದರು.

ರಡ್ಡಿ ಸಮಾಜಕ್ಕೆ ಬಡತನ ಬರದಂತೆ ಶ್ರೀ ಶೈಲ ಮಲ್ಲಿಕಾರ್ಜುನಸ್ವಾಮಿಯಲ್ಲಿ ಬೇಡಿಕೊಂಡು ಸಮಾಜದ ಏಳಿಗೆಗಾಗಿ ಹೇಮರೆಡ್ಡಿ ಮಲ್ಲಮ್ಮ ಶ್ರಮಿಸಿದ್ದಾರೆ ಎಂದು ಹೇಳಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ತಾಜ್‌ಪೀರ್, ಜಿಲ್ಲಾ ವೀರಶೈವ–ಲಿಂಗಾಯತ ಹೇಮರೆಡ್ಡಿ ಮಲ್ಲಮ್ಮ ಸಮಾಜ ಅಧ್ಯಕ್ಷ ಜಿ. ಚಿದಾನಂದಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು ಸಮಾಜದ ಮುಖಂಡರು ಇದ್ದರು. ನಂತರ ಗೀತಗಾಯನ ನಡೆಯಿತು.

# ಕಾನೂನು ಸುವ್ಯವಸ್ಥೆ ಬಗ್ಗೆ ವಿಸಿ ಮೂಲಕ ಸಿಎಂ ಗೆ ವರದಿ






**ಬೆಂಗಳೂರು:** ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ನಾಗರೀಕರ ರಕ್ಷಣಾ ಕಾರ್ಯಚಟುವಟಿಕೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಹಿರಿಯ ಪೋಲಿಸ್ ಅಧಿಕಾರಿಗಳು, ಎಲ್ಲಾ ಮಹಾನಗರಗಳ ಆಯುಕ್ತರು,ಜಿಲ್ಲಾಧಿಕಾರಿಗಳು,ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಶನಿವಾರ ಮಾಹಿತಿ ಪಡೆದರು.

ಗೃಹ ಸಚಿವರಾದ. ಡಾ ಜಿ ಪರಮೇಶ್ವರ್, ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ ಖರ್ಗೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷರಾದ ರೇವಣ್ಣ, ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಎಲ್ ಕೆ ಅತೀಕ್, ಪೊಲೀಸ್ ಮಹಾ ನಿರ್ದೇಶಕರಾದ ಅಲೋಕ್ ಮೋಹನ್ , ನಗರ ಪೊಲೀಸ್ ಆಯುಕ್ತರಾದ ದಯಾನಂದ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೈಕ್ರೋ ನ್ಯೂಸ್

### ಅತಿಥಿ ಉಪನ್ಯಾಸಕ ಮತ್ತು ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
2025–26ನೇ ಸಾಲಿಗೆ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ವಸತಿ ಕಾಲೇಜು, ಮೌಲಾನಾ ಆಜಾದ್ ಮಾದರಿ ಶಾಲೆ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ, ಶಿಕ್ಷಕರ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ, ಕನಕಗಿರಿ, ಕಾರಟಗಿ ಮತ್ತು ಕುಕನೂರು ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಮೌಲಾನಾ ಆಜಾದ್ ಮಾದರಿ ಶಾಲೆ ಹಾಗೂ ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಮತ್ತು ಶಿಕ್ಷಕರ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರು ಹಾಗೂ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://dom.karnataka.gov.in ನಲ್ಲಿ ಅಥವಾ ಶಾಲೆ, ಕಾಲೇಜುಗಳಿಗೆ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರ ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಭೇಟಿ ನೀಡಿ ಅರ್ಜಿ ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ, ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕಛೇರಿ ವೇಳೆಯಲ್ಲಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08539–225070, ಕುಷ್ಟಗಿ ಮತ್ತು ಕೊಪ್ಪಳ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರದ ಮೊ.ನಂ. 9738467445, ಗಂಗಾವತಿ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ದೂರವಾಣಿ ಸಂಖ್ಯೆ: 9740346533, ಯಲಬುರ್ಗಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮೊ.ನಂ. 9611419830ಗೆ ಸಂಪರ್ಕಿಸುವಂತೆ ಕೊಪ್ಪಳ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಹೊಸಪೇಟೆ ನಗರದ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದಿಂದ ಬಸವೇಶ್ವರ ವೃತ್ತದವರೆಗೆ ಸಾಂಸ್ಕೃತಿಕ ನಾಯಕ ಬಸವೇಶ್ವರ ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತ್ಯೋತ್ಸವದ ಬೃಹತ್ ಮೆರವಣಿಗೆಯಲ್ಲಿ ನಡೆಯಿತು. ಮೆರವಣಿಗೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರು, ಯುವಕರು, ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು. ನಂತರ ಬಸವೇಶ್ವರ ವೃತ್ತದಲ್ಲಿ ಸಮಾರಂಭ ನಡೆಯಿತು.**

# ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಆದರ್ಶ ತತ್ವಗಳನ್ನು ಪಾಲಿಸೋಣ

**ಮೊದಲ ಪುಟದಿಂದ**
ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜನಮಾನಸದಲ್ಲಿ ತನ್ನ ಭಕ್ತಿ ಹಾಗೂ ಕಾಯಕದಿಂದ ಮನೆಮಾತಾಗಿದ್ದಾರೆ. ಕೌಟುಂಬಿಕ ಸಂಕಷ್ಟಗಳನ್ನು ಮೆಟ್ಟಿ ನಿಂತು, ಆದರ್ಶ ಮೌಲ್ಯಗಳನ್ನು ಬದುಕಿನಲ್ಲಿ ರೂಢಿಸಿಕೊಂಡು ಸಾಮಾಜಿಕ ಹಾಗೂ ಧಾರ್ಮಿಕ ಚಿಂತನೆಯಲ್ಲಿ ಸಾಧನೆಗೈದ ಮಹಾಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸ್ತ್ರೀ ಕುಲಕ್ಕೆ ಮಾದರಿ. ಹೇಮರೆಡ್ಡಿ ಮಲ್ಲಮ್ಮನ ಪವಾಡ ಹಾಗೂ ಭಕ್ತಿಯ ಕುರಿತು ಹಲವು ಪ್ರತೀತಿ ಹಾಗೂ ಕಥನಗಳಿವೆ. ಸಂತ ಶಿಶುನಾಳ ಶರೀಫರು ಹೇಮರೆಡ್ಡಿ ಮಲ್ಲಮ್ಮಳನ್ನು ರೆಡ್ಡಿ ಕುಲದ ಉದ್ಧಾರಕಳು ಎಂದು ಬಣ್ಣಿಸಿದ್ದಾರೆ.

ಹೇಮರೆಡ್ಡಿ ಮಲ್ಲಮ್ಮ ಅವರು ಆಂದ್ರಪ್ರದೇಶದ ಶ್ರೀಶೈಲದ ದಕ್ಷಿಣ ದಿಕ್ಕಿನಲ್ಲಿರುವ ವೆಲ್ಲಟೂರು ಬಳಿಯ ರಾಮಪುರ ಗ್ರಾಮದ ಸುಸಂಸ್ಕೃತ ಮನೆತನದ ರಾಮರೆಡ್ಡಿ ಹಾಗೂ ಗೌರಮ್ಮ ದಂಪತಿಗಳಿಗೆ ಮಗಳಾಗಿ ಜನಿಸಿದರು. ಚಿಕ್ಕಂದಿನಿಂದಲೂ ಶಿವಭಕ್ತೆಯಾದ ಮಲ್ಲಮ್ಮ ತನ್ನ ಹದಿನಾರನೆ ವಯಸ್ಸಿಗೆ ಸಿದ್ದಾಪುರ ಸಂಸ್ಥಾನದ ಒಡೆಯ ಹೇಮರೆಡ್ಡಿ ಅವರ ಮೂರನೆ ಮಗ ಭರಮರೆಡ್ಡಿಯನ್ನು ಮದುವೆಯಾದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ವಿ.ಎಂ.ವೀರಭದ್ರಯ್ಯ ತಂಡದಿಂದ ವಚನ ಸಂಗೀತ ಪ್ರಸ್ತುತ ಪಡಿಸಿದರು.ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಮಾಜದ ಮುಖಂಡರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ್, ಮಹಾನಗರ ಪಾಲಿಕೆಯ ಸದಸ್ಯರಾದ ಸುರೇಖಾ ಮಲ್ಲನಗೌಡ, ಸಹಾಯಕ ಆಯುಕ್ತ ಪಿ.ಪ್ರಮೋದ್ ಸೇರಿದಂತೆ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ಸಂಭ್ರಮದ ಮೆರವಣಿಗೆ:** ಹೇಮರೆಡ್ಡಿ ಮಲ್ಲಮ್ಮ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.
ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಗಮನ ಸೆಳೆದವು.
ಮೆರವಣಿಗೆಯು ನಗರದ ಶ್ರೀ ಕನಕ ದುರ್ಗಮ್ಮ ದೇವಸ್ಥಾನದಿಂದ ಆರಂಭವಾಗಿ ಎಸ್‌ಪಿ ಸರ್ಕಲ್ ಮೂಲಕ ಬಸವ ಭವನದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
1 ನಂ
ಜಿಲ್ಲಾಮಟ್ಟದ ದಿನಪತ್ರಿಕೆ
Expand your brand's reach
Wider with Hampi Times!
Why Advertise with Us?
Widespread Reach – Thousands of dedicated readers across the region.
Targeted Local Audience – Connect with local customers and tourists.
Affordable & Effective – Cost-effective ad packages with maximum visibility.
Print + Digital Impact – Reach Readers through both newspaper and online platforms.
Trusted Reputation – A credible news source with a strong community presence.
About Hampi Times
Hampi Times is a leading local Daily newspaper dedicated to delivering accurate and insightful news. With a strong readership across the region, we offer a powerful platform for businesses to reach their target Readers effectively!
We offer Flexible advertising plans to suit your business needs Quarter/half/FullPage Ad
Call Us for more info :M: 9448633038
www.hampitimes.com/epaper.hampitimes.com